
"BADAVARA BANDHU"








ESTABLISHED 1932.

ಸಂಪುಟ ೧. | ತಾರೀಕು ೧ನೇ ಜುಲಾಯಿ ೧೯೩೨. | ಸಂಚಿಕೆ ೩.



ಹಿತಾಶಂಸೆ.

ಬಡವಿಯೊಳಗಡಗಿರುವರಕಟಾ ।
ಬಡಕುಟುಂಬದ ಹಲವು ಸಾಧ್ವಿಯು ।
ರುಡುವುದಕೆ ಮಾರುದ್ದ ಬಟ್ಟೆಗೆ ತಮಗೆ ಗತಿ
ಯಿರದೆ ॥
ಒಡಲ ಮಕ್ಕಳ ಬಾವಿಗೆಸೆವರು ।
ಸುಡುವ ಹೊಟ್ಟೆಯು ತಣಿಸಲಾರದೆ ।
ಮಡಿಯುತಿರುವರು ಬಹಳ ಬಡವರು ಸ್ವರ್ಣಭೂಮಿಯಲಿ! ॥ ೧ ॥

ಸೃಷ್ಟಿಕರ್ತನ ಪರಮಕರುಣಾ ।
ದೃಷ್ಟಿಯಲಿ ತಾನಾಗಿ ವನದಲಿ ।
ಹುಟ್ಟಿ ಬೆಳೆದಳಿವಾ ಮಹಾ ವೃಕ್ಷಗಳ ಕಟ್ಟಿಗೆಯ ॥
ಕಟ್ಟಿ ತಂದರೆ ಗಂಜಿ ಬೇಯಿಸು ।
ವಷ್ಟರಾ ಸ್ವಾತಂತ್ರ್ಯವಿಲ್ಲದೆ ।
ಕಷ್ಟಪಡುವರು ಹಲರು ಬಡವರು ಸ್ವರ್ಣಭೂಮಿಯಲಿ! ॥ ೨ ॥

ಕ್ಷಾರವಾರಿಧಿಯಲ್ಲಿ ಚರಣಾಂ ।
ಭೋರುಹವು ರಂಜಿಸುವ ವಿಭವದ ।
ಭಾರತಾಂಬೆಯ ಮಕ್ಕಳುಪ್ಪನ್ನಾಯ್ದುಕೊಳ್ಳುವರೆ ॥
ಘೋರ ಶಾಸನಬಾಧೆಯೆನಲಿದ ।
ನಾರು ಸೈರಿಸಲಾಪರಕಟ! ಕ ।
ಠೋರ ಚಿಂತೆಯೊಳಿಹರು ಬಡವರು ಸ್ವರ್ಣಭೂಮಿಯಲಿ! ॥ ೩ ॥

ಧಾರಿಣಿಯು ಹೊಲವಧಿಕ ಧನಿಕರ ।
ಸೇರಿಹುದು ಬಿಟ್ಟುಳಿದ ನೆಲವನು ।
ಸೇರಿಹರು ಸಂಕಷ್ಟಜೀವಿಗಳಾದ ಬಡಜನರು– ॥
ಕ್ರೂರ ಭೂಸ್ವಾಮಿಗಳ ಮುಷ್ಟಿಯು ।
ಮೀರಿದಾ ಬಗೆಬಗೆಯ ಕರಗಳ ।
ಘೋರ ಹತಿಯಲಿ ಕೊರಗುತಿರುವರು ಸ್ವರ್ಣ
ಭೂಮಿಯಲಿ! ॥ ೪ ॥

ಬಡವರನು ಧನಬಲರು ನುಂಗುವ ।
ಕಡು ಕಠೋರ ವಿಲಾಸವಿದು ನೃಪ ।
ರೊಡನೆ ವಾಡಿಕೆಯಾಗಿ ಜಗದಲಿ ರೂಢಿಯಾಗಿಹುದು ॥
ಒಡನೆ "**ಬಡವರ ಬಂಧು!**" ನೀನಿದ ।
ತಡೆದು ನಿಲ್ಲಿಸಿ ದೇಶಮಾತೆಯ ।
ಮಡಿಲ ಮಕ್ಕಳ ಸೋದರಪ್ರೇಮವನು ಕಳೆಗೊಳಿಸು! ॥ ೫ ॥

ಪರರ ಯಂತ್ರಾಲಯಗಳಲಿ ಹಗ ।
ಲಿರುಳು ದುಡಿವಾ ಬಾಲವೃದ್ಧರ- ।
ಜ್ವರದ ಸೀಮೆಗೆ ದನಿಗಳಟ್ಟುವ ಗಟ್ಟದಾಳುಗಳ- ॥
ಕರಚರಣ ಮುಂಖ್ಯಾಂಗ ಹೀನರ- ।
ಪರಮ ದೀನರ-ವೃತ್ತಿಶೂನ್ಯರ- ।
ಪರಮತಕೆ ಪದವಿಡುವ ಬಡವರ-ಬಂಧುವೆಂದೆನಿಸು! ॥ ೬ ॥

ಮುಂದೆ "**ಬಡವರ ಬಂಧು**" ಬಲದಲಿ ।
ನಿಂದು ಬಡಜನಹಿತದ ಪ್ರತಿನಿಧಿ ।
ಯೆಂದು ಕೀರ್ತಿಯ ಪಡೆದು ಸಾರ್ಥಕ ನಾಮದಲಿ ನಲಿದು ॥
ಬಂಧುಜನ ಸೇವೆಯನು ಸಾಹಸ ।
ದಿಂದೆಸಗಿ ಚಿರಕಾಲ ದೇಶದ ।
ಬಂಧು-ಲೋಕದ ಬಂಧು-ವಿಶ್ವದ ಬಂಧು-ವೆಂದೆನಿಸು! ॥ ೭ ॥

ತಥಾಸ್ತು!

ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ.

ಬಡತನವು ಮನುಷ್ಯನಿಗೆ ಹಾನಿಯನ್ನು ಬಯಸುವುದಿಲ್ಲ—ಅದು ಅವನಿಗೆ ಪಾಠವನ್ನು ಕಲಿಸುತ್ತದೆ.

ಬಡವರೂ ಐಶ್ವರ್ಯವಂತರೂ.

ಸರಿಯಾಗಿ ಪರಿಶೀಲಿಸಿ ನೋಡಿದರೆ, ಮಾನವವರ್ಗದಲ್ಲಿ ನಮಗೆ ಕಂಡುಬರುವುದು,—ಬಡವರು ಮತ್ತು ಐಶ್ವರ್ಯವಂತರು ಎಂಬೆರಡು ಭೇದಗಳು. ರೂಢಿಯಲ್ಲಿ, ಬಡವರೆಂದರೆ—ಹಣಕಾಸು ಇಲ್ಲದವರು. ಐಶ್ವರ್ಯವಂತರೆಂದರೆ—ಹಣಕಾಸು ಇದ್ದವರು. ಪ್ರಪಂಚದಲ್ಲಿನ ಮುಕ್ಕಾಲುವಾಸಿ ಜನರು ಬಡವರೇ ಆಗಿರುತ್ತಾರೆ. ಆದರೆ ಇಷ್ಟು ಜನರೂ ತಾವು ಬಡವರೆಂದು ಬಾಯ್ಬಿಟ್ಟು ಹೇಳುವುದಿಲ್ಲ. ತಾವು ಬಡವರೆಂದು ಅವರ ಮನಸ್ಸಿಗೆ ಗೊತ್ತಿರುವುದಾದರೂ, ಅವರು ತಮ್ಮ ಬಡಸ್ಥಿತಿಯನ್ನೊಪ್ಪುವಂತಿಲ್ಲ. ಇದು ಮನುಷ್ಯನ ಸ್ವಾಭಾವಿಕವಾದ ಒಂದು ವಿಶೇಷ ಗುಣ—ಅಭಿಮಾನ!

ಬಡವರಿಗೆ ಐಶ್ವರ್ಯವಂತರ ಸಹಾಯವು ಅತ್ಯಗತ್ಯ. ಐಶ್ವರ್ಯವಂತರಿಗೆ ಬಡವರ ಸಹಾಯವೂ ಅಗತ್ಯ. ಸಿರಿವಂತನ ಖಜಾನೆಯಲ್ಲಿ ಹೇರಳ ಧನವಿರಬಹುದು; ಆದರೂ, ಅದನ್ನು ಉಪಯೋಗಕ್ಕೆ ಹಾಕಿ, ಆ ಧನವನ್ನು ಅಭಿವೃದ್ಧಿಸುವ ಭಾರವು ಬಡವನಲ್ಲಿದೆ. ಅದಕ್ಕಾಗಿಯೇ (Capital and Labour) ಭಂಡವಾಳ ಮತ್ತು ದುಡಿತಗಳೆರಡೂ ಪರಸ್ಪರ ಐಕ್ಯವಾಗಿರಬೇಕೆಂದು ತಜ್ಞರೆನ್ನುವುದು. ಸಿರಿವಂತನ ಭಂಡವಾಳವನ್ನು ವೃದ್ಧಿಸಬೇಕೆಂಬ ಇಚ್ಛೆಯು ಬಡವನಲ್ಲಿ ಸ್ಫೂರ್ತಿಪೂರ್ವಕವಾಗಿ ಆಗಿಬಿಟ್ಟಿತೆಂದರೆ, ಮತ್ತೆ ಆ ಹಣಕ್ಕೆ ಅಳಿವಿಲ್ಲ. ನಿಜಸ್ಥಿತಿಯು ಹೀಗಿದ್ದರೂ, ಈಗಿನ ಕಾಲದಲ್ಲಿ ನಾವು ಪ್ರಪಂಚ ವ್ಯವಹಾರವನ್ನು ವಿಶಾಲದೃಷ್ಟಿಯಿಂದವಲೋಕಿಸಿದರೆ, ಭಂಡವಾಳಗಾರರು ತಮ್ಮ ಅಡಿಯಾಳುಗಳಾಗಿರುವ ಮಜೂರಿಗಾರರನ್ನು ವಕ್ರದೃಷ್ಟಿಯಿಂದ ನೋಡುತ್ತಿರುವುದು ಕಂಡುಬರುತ್ತದೆ. ಈಗಿನ ಭಂಡವಾಳಗಾರರಿಗೆ ಬಡ ಮಜೂರರ ಮೇಲೆ ಭರವಸೆಯಿಲ್ಲ—ದಯೆಯಿಲ್ಲ. ಮಜೂರರ ಕೆಲಸದ ಮೇಲೆ ಅವರಿಗೆ ಭರವಸೆ ಇಲ್ಲ. ಈ ವಿಷಯವು ಒಡೆದು ಕಾಣಬೇಕಾದರೆ ನಾವು ಹಿಂದೂದೇಶದ ಮಿಲ್ಲು, ಗಿರಣಿ, ಕಾರ್ಖಾನೆ, ಛಾಪಖಾನೆ ಮೊದಲಾದ ವ್ಯಾಪಾರ ವಾಣಿಜ್ಯ ಸಂಸ್ಥೆಗಳನ್ನು ಸಂದರ್ಶಿಸಬೇಕು. ಮಜೂರರೊಡನೆ ಸಮ್ಮಿಳಿತರಾಗಿ ಅವರ ಸ್ಥಿತಿಗತಿಗಳನ್ನು ತಿಳಿಯಬೇಕು.

ಹಿಂದೀಯ ಭಂಡವಾಳಗಾರರ ಮುಖ್ಯ ದೋಷವೆಂದರೆ, ಅವರು ತಮ್ಮ ಅಡಿಯಾಳುಗಳ ಕಡೆಗೆ ತೋರುವ ದುರ್ಲಕ್ಷ್ಯ-ಅವಿಶ್ವಾಸ. ಅವರ ಈ ರೀತಿಯು ಅವಿಶ್ವಾಸದಿಂದಾಗಿ, ಪ್ರಖ್ಯಾತ ಹೆನ್ರಿಫೋರ್ಡರೆನ್ನುವಂತೆ, ಈಗ "ಕೆಲಸಗಾರರು ಗಡಿಯಾರದ ಮುಖವನ್ನೂ, ತಾರೀಕು ಪಟ್ಟಿಯ ಹಾಳೆಗಳನ್ನೂ ನೋಡುತ್ತ ಕೆಲಸಮಾಡುತ್ತಿರುವರು" ಎಂದರೆ—ಯಜಮಾನನು ತಮ್ಮನ್ನು ನೋಡುವ ವೋರೆನೋಟದಿಂದಾಗಿ ಮಜೂರರ ಹೃದಯದಲ್ಲಿ ಅವನಿಗೆ ಸ್ಥಳವಿಲ್ಲದಂತಾಗಿದೆ. ಮಜೂರರು ಮ್ಹಾಲಿಕನ ಹಣವನ್ನು ತಮ್ಮ ಹಣವೆಂದು ಭಾವಿಸುತ್ತಿಲ್ಲ. ಯಜಮಾನನೊಡನೆ ಸಹಕರಿಸಿ ವ್ಯಾಪಾರವಾಣಿಜ್ಯವನ್ನು ನಡೆಸಬೇಕೆಂಬ ಕುತೂಹಲವು ಈಗಿನ ಕಾಲದ ಕೆಲಸಗಾರರಲ್ಲಿಲ್ಲ. ಅವರು, ಕಾರ್ಖಾನೆ, ಗಿರಣಿ ಮೊದಲಾದ ಕಡೆಗಳಲ್ಲಿ ಕಷ್ಟಪಟ್ಟು ಕೆಲಸ ಮಾಡುತ್ತಿರುವರೆಂದಾದರೆ, ಅದು ಸಂಸಾರತಾಪತ್ರಯ ನಿವಾರಣೆಗಾಗಿ,—ಉದರಪೋಷಣೆಗಾಗಿ; ಅಲ್ಲದೆ ಮತ್ತೆ ಬೇರೆಯಲ್ಲ. ಕೆಲಸಗಾ[ರರ] ಹೃದಯವು ಈ ರೀತಿಯಾಗಿ ಪರಿವರ್ತ[ನೆ]ವಾಗಿರುವುದಕ್ಕೆ ಮ್ಹಾಲಿಕರು ಅವರ [ಕಡೆ] ತೋರುವ ದೌಷ್ಟ್ಯವೇ ಕಾರಣವಾಗಿ[ರು]ತ್ತದೆ.

"ನನ್ನ ಹಣವು ನನ್ನದಲ್ಲ; ಅದು ನನ್ನ ಕೆಲಸಗಾರರದ[ು]. ಅವರು ಅದನ್ನು ಹೆಚ್ಚಿಸಿದರೆ ನಾನು ಉನ್ನತಿ ಹೊಂದಿದೆ; ಅವ[ರು] ಅದನ್ನು ಕಡಿಮೆ ಮಾಡಿದರೆ ನಾನು ಅವನತಿ ಹೊಂದಿದೆ" ಎಂಬು[ದು] ಹೆನ್ರಿಫೋರ್ಡರ ಹೇಳಿಕೆ. ಈ ರೀತಿ ಹೇಳುವವರು ನಮ್ಮ ಭಂ[ಡ]ವಾಳಗಾರರಲ್ಲೆಷ್ಟು ಮಂದಿ? ನಮ್ಮವರು ಹೀಗೆನ್ನುವ ಮಾತಂತಿರ[ಲಿ], ಕೆಲಸಗಾರರ ಕೆಲಸದ ಹಕ್ಕಾಗಿರುವ ಮಜೂರಿಯನ್ನು ಕೊಡುವಾ[ಗ] ಅವರನ್ನು ಬೈದು ಭಂಗಿಸುವವರೆಷ್ಟು ಮಂದಿ ಇಲ್ಲ? ಹಿಂದೀ[ಯ] ಭಂಡವಾಳಗಾರರಿಗೆ ಕೆಲಸಗಾರರ ದುಡಿತದ ಮೇಲೆ ವಿಶ್ವಾಸವಿ[ರು]ವುದಿಲ್ಲ. ಕೆಲಸಗಾರರಿಗೆ ಸಂಬಳವನ್ನು ಹೆಚ್ಚಿಸುವಂತಹದು [...]ವಾಗಿಯೂ ಒಂದು ಮಹಾ ನಷ್ಟವೆಂದೇ ಅವರ ಆಲೋಚನೆ. ಕೆಲ[ಸ]ಗಾರರಿಗೆ ಸಂಬಳವನ್ನು ಯೋಗ್ಯ ರೀತಿಯಿಂದ ಕೊಟ್ಟುಬಿಟ್ಟರೆ, [...]ರಿಂದ ತಮ್ಮ ಭಂಡವಾಳಕ್ಕೆ ಎಷ್ಟೊಂದು ಸತ್ಪ್ರಯೋಜನವು ಲ[ಭ್ಯ]ವಾದೀತೆಂದು ಅವರಿಗೆ ಗೊತ್ತಿರುವುದಿಲ್ಲ. ಹೆನ್ರಿಫೋರ್ಡರು [...] ಸಾವಿರಾರು ಕೆಲಸಗಾರರಿಗೆ ಸಕಾರಣವಾದ "ಬೋನಸ್ಸ"ನ[ು] ಯೋಗ್ಯತೆಗೆ ತಕ್ಕ ಸಂಬಳವನ್ನೂ ಕೊಡುವರಲ್ಲದೆ, ತನ್ನ ಜನರ ಅ[ನು]ಕೂಲತೆಗಾಗಿ ಬೇಕಾದಷ್ಟು ಫೋರ್ಡ್ ಕಾರುಗಳನ್ನು ಧರ್ಮಾ[ರ್ಥ]ವಾಗಿ ಕೊಡುತ್ತಿರುವರು. ಅವರ ಉದಾರತ್ವವೇ, ವಿಶ್ವಾಸವ[ೇ] ಇಂದು ಅವರನ್ನು ಕುಬೇರನ ಪದವಿಗೇರಿಸಿಯದೆ.

ಕೆಲಸಗಾರರನ್ನು ಧನಿಯು ಎಷ್ಟು ಬಳಲಿಸುವನೋ ಅಷ್ಟು ಅ[ವನ] ವ್ಯಾಪಾರ ವಾಣಿಜ್ಯಗಳೂ ಬಳಲುತ್ತವೆ. ಅವನು ಅವರನ್ನು ಎ[ಷ್ಟು] ನಿಷ್ಠುರಭಾವದಿಂದ ಕಾಣುತ್ತಾನೋ, ಅಷ್ಟು ಅವನ ಕೆಲಸವೂ ನ[ಷ್ಟ]ವಾಗುತ್ತದೆ. ಬದಲಿಗೆ, ಅವನು ಅವರನ್ನು ಎಷ್ಟು ಮಮತೆಯಿಂದ [...]ಸುತ್ತಾನೋ, ಅಷ್ಟು ಅವನ ಸಂಸ್ಥೆಯ ಕೆಲಸವೂ ಪುಷ್ಟವಾಗುತ್ತ[ದೆ]. ಅವನು ಅವರಿಗೆ ಎಷ್ಟು ಸ್ವಾತಂತ್ರ್ಯ ಮತ್ತು ಅನುಕೂಲತೆಗಳನ್ನಿ[ತ್ತು] ಸಂರಕ್ಷಿಸುತ್ತಾನೋ ಅಷ್ಟು ಅವನ ವ್ಯಾಪಾರವು ವೃದ್ಧಿಯಾಗುತ್ತದೆ.

ಮನುಷ್ಯ ಸ್ವಭಾವವೇ ಅಂತಹುದು;—ತನ್ನ ಖಾಸಗಿ ಕೆ[ಲಸ]ಗಳನ್ನು ಮಾಡುವಾಗ ಅದರಿಂದ ಬೇಸರವು ಉತ್ಪನ್ನವಾಗುವುದಿ[ಲ್ಲ]. ಆದರೆ ಅನ್ಯರ ಕೆಲಸವನ್ನು ಮಾಡುವಾಗ ಮನಸ್ಸಿನಲ್ಲಿ, ಬೇಸರವಾ[ಗು]ತ್ತದೆ. ಅಂತಹ ನೈಸರ್ಗಿಕ ಆಲಸ್ಯಕ್ಕೆ ಧನಿಯ ಬಂಧನರೂ[ಪ] ರಕ್ಷಣೆಯೂ ದೊರೆತರೆ, ಮತ್ತೆ ಒಂದು ಕಡೆಯಿಂದ ಕೆಲಸಮಾಡುವವ[ನ] ಜೀವನವೂ, ಒಂದು ಕಡೆಯಿಂದ ಮಾಡಿಸುವವನ ಹಣವೂ ನಾಶವಾ[ಗು]ವುದೇ ಸರಿ. ಕೆಲಸಗಾರರ ಮನೋವೃತ್ತಿಯನ್ನು ಆಳವಾಗಿ ವಿಚಾ[ರಿಸಿ] ಕೊಂಡಿರುವುದರಿಂದಲೇ, ಇಂದು ಸರಕಾರವು ತನ್ನ ಸರ್ವ ಕೆಲ[ಸ]ಗಾರರಿಗೂ ತಕ್ಕ 'ನಿವೃತ್ತಿದ್ರವ್ಯ'ವನ್ನೋ, ರಜೆಯನ್ನೋ, ಬಿಡುವನ್ನೋ ಕಲ್ಪಿಸಿಕೊಟ್ಟಿರುತ್ತದೆ. ಸರಕಾರೀ ನೌಕರರು ಸಾಲಮೂಲಗಳನ್ನೋ ವ್ಯಾಪಾರ ವಹಿವಾಟುಗಳನ್ನೋ ಮಾಡಬಾರದಾಗಿಯೂ, ಅನ್ಯ[...]

ಜಾಮೀನು ನಿಲ್ಲಬಾರದಾಗಿಯೂ, ಸಾರ್ವಜನಿಕ ಕೆಲಸದಲ್ಲಿ ಕೈಹಾಕಬಾರದಾಗಿಯೂ, ಮುಂತಾಗಿ ಸರಕಾರದ ಅಪ್ಪಣೆಯಿರುವುದು ಅದರ ಆಫೀಸುಗಳ ಕೆಲಸಗಳು ಸ್ವಚ್ಛಂದವಾಗಿ, ಸಾಂಗವಾಗಿ ನೆರವೇರಬೇಕೆಂಬ ಇರಾಧೆಯಿಂದಲೇ.

ಭಂಡವಾಳಗಾರರು ಕೆಲಸಗಾರರನ್ನು ತಮ್ಮಂತೆಯೇ ಎಂದು ಪರಿಭಾವಿಸಬೇಕು. ಅವರ ರಕ್ಷಣೆಯು ತಮ್ಮಿಂದ ಯಾವ ರೀತಿಯಲ್ಲಿ ಶ್ರೇಯಸ್ಕರವಾಗಿ ಆದೀತೆಂದು ಹಿತಚಿಂತನೆಯನ್ನು ಮಾಡಬೇಕು. ಕೆಲಸಗಾರರು ತಮ್ಮ ಗ್ರಹವೆಚ್ಚಗಳ ತಾಪತ್ರಯಗಳಲ್ಲಿ ಸಿಲುಕಿದರೆ, ಅವರಿಗೆ ತಕ್ಕ ಜವಾಬ್ದಾರಿಯಿಂದ ಸಹಾಯವನ್ನೀಯಬೇಕು. ಎಲ್ಲಾ ರೀತಿಯಿಂದಲೂ ಅವರನ್ನು ಸ್ಫೂರ್ತಿಯಿಂದ ಹುರಿದುಂಬಿಸಬೇಕು. ಕಾರಣ–ದಬ್ಬಾಳಿಕೆಯು, ದಂಡೋಪಾಯವು–ನಿರರ್ಥಕವು. ದಯಾಭಾವವು–ಸಾಮೋಪಾಯವು ಸರ್ವಸಾಧಕವು.

ಹೀಗೆ ಮಾಡದೆ ಕೆಲಸಗಾರರಿಗೆ ಸ್ವೇಚ್ಛೆ ಪ್ರಕಾರ ಮಜೂರಿಯನ್ನೀಯುವುದಲ್ಲ; ಅವರನ್ನು ತಮ್ಮಿಚ್ಛೆಯಾನುಸಾರವಾಗಿ ಸಿಕ್ಕಾಬಟ್ಟೆ ದಣಿಸುವುದಲ್ಲ. ಸಂಸಾರತಾಪತ್ರಯುಗಳಿಂದಾಗಿ ಅವರು ಸಹಾಯವನ್ನು ಯಾಚಿಸಿ ಬಂದರೆ, ಅವರ ಎದೆಗೆ ನಿಷ್ಠುರೋಕ್ತಿಗಳ ಬಾಣಗಳನ್ನು ಬಿಟ್ಟು ಅವರನ್ನು ಅಧೋಮುಖವಾಗಗೊಡಿಸುವುದಲ್ಲ. ಅವರನ್ನು ತಮ್ಮ ಅವಿಶ್ವಾಸದ, ಅಪನಂಬಿಕೆಯ ಪಾದದಡಿಯಲ್ಲಿ ಒತ್ತಿ ಹಿಡಿಯುವುದಲ್ಲ; ಅವರ ಸಂಬಳವನ್ನು ಮನಃ ಬಂದಂತೆ ಕಡಿಯುವುದಲ್ಲ. ಹೀಗಾದರೆ ಮಾತ್ರ ಬಡವರಿಗೂ ಐಶ್ವರ್ಯವಂತರಿಗೂ ಶ್ರೇಯಸ್ಸಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಬಡವರೂ ಐಶ್ವರ್ಯವಂತರೂ ಪರಸ್ಪರ ನೆಮ್ಮದಿಯಿಂದ, ಒಗ್ಗಟ್ಟಿನಿಂದ, ಸಹಕಾರದಿಂದ, ವಿಶ್ವಾಸದಿಂದ ನಡೆದುಕೊಳ್ಳಬೇಕು.

ಈಗಿನ ಭಂಡವಾಳಗಾರರ ಮತ್ತೊಂದು ವಿಶೇಷ ಗುಣವೇನೆಂದರೆ–ಅವರಿಗೆ ಕಡಿಮೆ ವೆಚ್ಚದಲ್ಲಿ ಹೆಚ್ಚು ಕೆಲಸವಾಗಬೇಕು. ಅಧಿಕ ಲಾಭವು ದೊರೆಯಬೇಕು. ಕೂಲಿಗಾರರಿಗೆ ಎಷ್ಟು ಕಡಿಮೆ ಕೂಲಿಯನ್ನು ಕೊಟ್ಟಿತೊ, ಅಷ್ಟು ಲಾಭವು ಹೆಚ್ಚೆಂದು ಅವರ ಭರವಸೆಯಿರುತ್ತದೆ. ಇಂತಹ ಭರವಸೆಗಿಂತ ಮೂಢ ಸಂಗತಿಯು ಬೇರೆಯಿದೆಯೇ?

ಮಹಾತ್ಮಾಗಾಂಧಿಯವರು ಇಂದಿನ ದಿನದಲ್ಲಿ ಸಾಧಿಸುವ ಬಡಜನೋದ್ಧಾರವು ಕೈಗೂಡಿ ಬರಬೇಕೆಂದಾದರೆ, ಅವರ ಮನೋಭೀಷ್ಟವಾಗಿರುವ ದೀನಜನರ ಸುಖದಿನಗಳು ಹಿಂದೂದೇಶದಲ್ಲಿ ಮೂಡಿಬರಬೇಕೆಂದಾದರೆ, ಅಂತೂ ಭಾರತಭೂಮಿಯು ಉನ್ನತಿಯ ಮಾರ್ಗವನ್ನು ಹಿಡಿಯಬೇಕೆಂದಾದರೆ, ಪ್ರತಿ ಹಳ್ಳಿ ಪಟ್ಟಣಗಳ ಭಂಡವಾಳಗಾರರು ತಮ್ಮ ಪಾದಸೇವಾನಿರತರಾದ ಬಡ ಬಾಂಧವರ ಮೇಲೆ ದಯಾರ್ದ್ರ ಹೃದಯಿಗಳಾಗಬೇಕು. ತಾವು ಬೇರೆಯಲ್ಲ, ತಮ್ಮ ಕೆಲಸಗಾರರು ಬೇರೆಯಲ್ಲ, ಎಂಬ ಭಾವನೆಯು ಅವರಲ್ಲಿ ತಲೆದೋರಬೇಕು. ಭಂಡವಾಳ ಮತ್ತು ದುಡಿತಗಳೊಳಗೆ ಪರಸ್ಪರ ಐಕಮತ್ಯವು ಸನ್ನಿಹಿತವಾಗಬೇಕು. ಬಡವರೂ ಐಶ್ವರ್ಯವಂತರೂ ನೆಮ್ಮದಿಯಿಂದ, ಒಕ್ಕಟ್ಟಿನಿಂದಿರಬೇಕು.

BUY INDIAN.

ಬೈ ಇಂಡಿಯನ್.

(ಲೇಖಕರು:–ಶ್ರೀ. ಬಿ. ನರ್ಸಪ್ಪ)

ದೇಶದೇಳ್ಗೆಗಾಗಿ ದೇಶಜನರೆ ಇತ್ತ ಕೇಳಿರಿ, ।
ದೇಶದಲ್ಲೆ ಆದ ವಸ್ತುವಡವೆಗಳನೆ ಕೊಳ್ಳಿರಿ ॥
ದೇಶದಲ್ಲಿ ಆದ ಬಟ್ಟೆಬರೆಗಳನ್ನು ಕೊಂಡರೆ, ।
ದೇಶಜನರಿಗಿಂದು ತಪ್ಪುತಿಹುದು ಹಣದ ತೊಂದರೆ ॥ ೧ ॥

"ದೊರಗು ಬಟ್ಟೆ ಬೇಡ"ವೆಂದು ನೀವು ಅಲ್ಲಗಳೆಯಲು, ।
ಕೊರಗಿಕೊರಗಿ ಸಾಯ್ವ ಕಾಲ ಸನ್ನಿಹಿತವು ಸತ್ಯವು ॥
ಮರುಗುತಿಹರು ಬಡವರೆಲ್ಲ; ಕಿವಿಯ ಕೊಟ್ಟು ಕೇಳಿರಿ, ।
ಕೊರಗುತಿಹರು ಸಕಲ ಜನರು, ಕಣ್ಣುಬಿಟ್ಟು ನೋಡಿರಿ ॥ ೨ ॥

ನೀವು ನೀವೆ ಸುಖದೊಳಿದ್ದು ಕಣ್ಣ ಮುಚ್ಚಿ ಇದ್ದರೆ, ।
ನೀವೆ ಉಂಡುತಿಂದು ತೇಗುಗಳನು ತೇಗುತಿದ್ದರೆ, ॥
ಕಾವುದೆಂತು ಮತ್ತು ಹೊಟ್ಟೆಗಿಲ್ಲದಿರುವ ಜನರನು? ।
ಜೀವವಿದ್ದು ಫಲವದೇನು ಪರರಿಗಾಗದಾತನು? ॥ ೩ ॥

ಹೇಟು, ಬೂಟು, ಕೋಟು, ಟಯ್ಯ ನೀವು ಬಯಸಬೇಡಿರಿ ।
ರಾಟೆ ನೂಲಿನಿಂದಲಾದ ವಸ್ತ್ರವನ್ನೆ ಕೊಳ್ಳಿರಿ ॥
ಪೇಟೆ ಜನರೆ, ನೀವು ಕೃತಕ ಸುಖಗಳನ್ನು ಬಯಸುತ ।
ಬೇಟೆಯಾಡ್ವಿರೇನು ನಿಮ್ಮ ಹಳ್ಳಿ ಜನರ ಜೀವವ? ॥ ೪ ॥

ಅತ್ತ ನೋಡಿ ಆಂಗ್ಲ ಜನರ ದೇಶಪ್ರೇಮ, ಕಾರ್ಯವ ।
ಇತ್ತ ನೋಡಿ ನಮ್ಮ ದೇಶಜನರ ಕುರುಡು ಬುದ್ಧಿಯ ॥
ಅತ್ತ ನೋಡಿ ರಾಣಿರಾಜರೆಲ್ಲ ಕೂಡಿ ದೇಶವ ।
ಉತ್ತಮತೆಗೆ ತರಲು ಮಾಡುತಿರುವ ಭಾರಿ ಯತ್ನವ ॥ ೫ ॥

ದೇಶಿ ದೇಶಿ ದೇಶಿ ದೇಶಿ ದೇಶಿ ಎಂದು ಹೇಳಿರಿ ।
ದೇಶಿ ದೇಶಿ ದೇಶಿ ದೇಶಿ ದೇಶಿಯನ್ನೆ ಪಡೆಯಿರಿ ॥
ದೇಶಿ ಜನರು ಸ್ಥಾಪಿಸಿದ ಸ್ವದೇಶಿ 'ಲೀಗಿ'ಗೆಲ್ಲರು ।
ಬೇಸರಿಸದೆ ಬಂದು ಸೇರಿ ದೇಶಸೇವೆ ಮಾಡಲು ॥ ೬ ॥

ರಾಜದ್ರೋಹವಾಗದಯ್ಯ "ಲೀಗಿ"ಗಿಂದು ಸೇರಲು, ।
ರಾಜಕೀಯ ಕಾರ್ಯವಲ್ಲ ದೇಶಿವಸ್ತು ಕೊಳ್ಳಲು, ॥
ರಾಜರಿಂದ ವಿಘ್ನವಿಲ್ಲ, ಇಂಥ ಸ್ವಂತ 'ಲೀಗಿ'ಗೆ ।
ರಾಜ್ಯದೇಳ್ಗೆಗಾಗಿ ಬಂದು ಸೇರಿರಿಂಥ ಲೀಗಿಗೆ ॥ ೭ ॥

ಮಹಾತ್ಮಾಗಾಂಧಿಯವರ ಗ್ರೇಮಫೋನ್ ರಿಕಾರ್ಡು.

ಭಗವಂತನ ಅಸ್ತಿತ್ವ.

ಲಂಡನಿನಲ್ಲಿ ಜರಗಿದ್ದ ರೌಂಡ್‌ಟೇಬಲ್ ಕೊನ್ಫರೆನ್ಸಿಗಾಗಿ ಮಹಾತ್ಮಾಗಾಂಧಿಯವರು (೨೮ನೇ ಅಗೋಸ್ತು ೧೯೩೧ರಲ್ಲಿ) ಅಲ್ಲಿಗೆ ಹೋಗಿದ್ದರಷ್ಟೆ! ಆ ಸಮಯದಲ್ಲಿ ಕೊಲುಂಬಿಯಾ ಗ್ರೇಮಫೋನ್ ಕಂಪೆನಿಯವರು ಮಹಾತ್ಮರ ಒಂದು ಲೋಕಸಂದೇಶವನ್ನು ರಿಕಾರ್ಡಿಗೆ ತೆಗೆದುಕೊಂಡರು. ಈ ರಿಕಾರ್ಡುಗಳು ಕೋಟಿಗಟ್ಟಲೆಯಾಗಿ ಮಾರಿಹೋಗುತ್ತಿವೆ. ಗ್ರೇಮಫೋನ್ ಇಲ್ಲದ ಬಡಕನ್ನಡಿಗರು ಈ ಲೋಕಪೂಜ್ಯರ ಉದಾತ್ತ ಸಂದೇಶವನ್ನು ಅರಿಯಲೆಂಬ ಆಶೆಯಿಂದ ಇದನ್ನು ರಿಕಾರ್ಡಿನಿಂಥ ಕನ್ನಡಕ್ಕೆ ಪರಿವರ್ತಿಸಿ ಇಲ್ಲಿ ಕೊಡಲಾಗಿದೆ.

"ಪ್ರಪಂಚದಲ್ಲಿರುವ ಎಲ್ಲಾ ಚರಾಚರ ವಸ್ತುಗಳಲ್ಲಿಯೂ ವ್ಯಾಪಿಸಿಕೊಂಡಿರುವ, ಅವರ್ಣನೀಯವಾದ ಮತ್ತು ಅವ್ಯಕ್ತವಾದ ಚೇತನಾಶಕ್ತಿಯೊಂದಿರುವುದು. ಅದು ನನ್ನ ಕಣ್ಣಿಗೆ ಕಾಣುವುದಿಲ್ಲವಾದರೂ, ಅದು ನನ್ನ ಅಂತರ್ಯಕ್ಕೆ ಭಾಸವಾಗುತ್ತದೆ.

ಈ ಅವ್ಯಕ್ತಶಕ್ತಿಯು ತನ್ನ ಇರುವಿಕೆಯನ್ನು ಎಲ್ಲೆಲ್ಲಿಯಯೂ ಪ್ರಕಾಶಿಸುತ್ತಿದೆ. ಆದರೆ ಇದು ಪ್ರತ್ಯಕ್ಷ ದರ್ಶನಕ್ಕೆ ಸಿಗದು. ಕಾರಣ—ಈ ಶಕ್ತಿಯು ನನ್ನ ಸಕಲ ಇಂದ್ರಿಯಗಳಿಗೂ ಗೋಚರವಾಗುವ ಎಲ್ಲಾ ವಸ್ತುಒಡವೆಗಳಿಂದಲೂ ಪ್ರತ್ಯೇಕವಿರುವಂತಹುದು. ವಿಚಾರಪರತೆಯಿಂದವಲೋಕಿಸಿದರೆ—ನಾವು ದೇವರ ಇರುವಿಕೆಯನ್ನು ಅಲ್ಪಸ್ವಲ್ಪ ಪರಿಮಾಣದಲ್ಲಿ ಕಂಡುಹಿಡಿಯಬಹುದು. ಅದಕ್ಕಾಗಿಯೇ ಆ ಶಕ್ತಿಯನ್ನು ನಾವು ಇಂದ್ರಿಯಾತೀತವೆನ್ನುವುದು.

ತಮ್ಮ ನಿತ್ಯ ನೈಮಿತ್ತಿಕ ವ್ಯವಹಾರಗಳಲ್ಲಿಯೂ ಕೂಡಾ ತಮ್ಮನ್ನು ಯಾರು, ಏಕೆ ಮತ್ತು ಹೇಗೆ ಆಳುತ್ತಿರುವರೆಂಬ ಸಂಗತಿಯು ಜನರಿಗೆ ತಿಳಿದಿರುವುದಿಲ್ಲ; ಹಾಗಿದ್ದರೂ, ಯಾವುದೋ ಒಂದು ಅಮೋಘ ಶಕ್ತಿಯು ಬಲವತ್ತಾದ ಆಡಳಿತದಲ್ಲಿ ತಾವಿದ್ದೇವೆಂದು ಅವರು ತಿಳಿದಿರುವರು. ಕೆಲವು ವರ್ಷಗಳ ಹಿಂದೆ ನಾನು ಮೈಸೂರುಪ್ರಾಂತ್ಯದಲ್ಲಿ ಸಂಚರಿಸುತ್ತಿದ್ದಾಗ ಕೆಲ ಬಡಹಳ್ಳಿಗರನ್ನು ಕಂಡು "ಮೈಸೂರು ಸೀಮೆಯನ್ನು ಯಾರು ಆಳುತ್ತಿರುವರು?" ಎಂದು ಪ್ರಶ್ನಿಸಿದೆ. ಅಷ್ಟರಲ್ಲಿ ಯಾರೋ ಒಬ್ಬನು, "ದೇವರೊಬ್ಬನು ಆಳುತ್ತಿರುವನೆ"ಂದು ಉತ್ತರವಿತ್ತನು. ತಮ್ಮ ಅರಸನ ಕುರಿತು ಆ ಜನರಿಗೆ ಅಷ್ಟೇ ಗೊತ್ತಿದ್ದಿತು—ಅರಸನ ಅರಸನಾದ ಭಗವಂತನಿಗೂ ನನಗೂ ಮಧ್ಯೆ ಇರುವ ಅಂತರವೆಂದರೆ—ಆ ಬಡಬಾಂಧವರಿಗೂ ಅವರ ರಾಜನಿಗೂ ಮಧ್ಯೆ ಇರುವ ಅಂತರಕ್ಕಿಂತ ಹೆಚ್ಚಿನದು. ಹೀಗಾಗಿ, ನಾನು ಭಗವಂತನ ಇರುವಿಕೆಯನ್ನು ಕಂಡುಹಿಡಿಯಲಾರೆನೆಂದರೆ, ಅದೇನು ಆಶ್ಚರ್ಯಕರ ಸಂಗತಿಯಲ್ಲ. ಆದರೂ, ಮೈಸೂರಿನ ಆ ಬಡಜನರು ತಮ್ಮ ರಾಜನ ಕುರಿತು ಪರಿಭಾವಿಸುವಂತೆ, ನಾನೂ, ಈ ಪ್ರಪಂಚವು ಒಂದು ಅಪ್ರತಿಹತ ನಿಯಮಕ್ಕೊಳಗಾಗಿದೆಯೆಂದೂ, ಚರಾಚರ ಪ್ರಾಣಿಚಯಗಳೆಲ್ಲ ದುರ್ಭೇದ್ಯವಾದ ಒಂದು ಶಾಸನಕ್ಕೊಳಪಟ್ಟಿವೆಯೆಂದೂ ಭಾವಿಸುತ್ತಿರುತ್ತೇನೆ.

ಇದೇನು ಒಂದು ಕುರುಡು ಕಾನೂನಲ್ಲ. ಕುರುಡು ಕಾನೂನು ಜೀವಂತವಾಗಿರುವ ಪ್ರಾಣಿಗಳ ಆಚರಣೆಗಳನ್ನು ಬಂಧಿಸಿಡಲಾರದು. ಶ್ರೀ ಜಗದೀಶ ಚಂದ್ರಬೋಸರ ಶೋಧಗಳಿಂದ (ಅವರಿಗೆ ಧನ್ಯವಾದಗಳಿರಲಿ!) ಜಡಪದಾರ್ಥಗಳು ಕೂಡಾ ಸಜೀವವಾಗಿರುವುವೆಂದು ಪರಿಶೋಧಿಸಲ್ಪಟ್ಟಿದೆ. ಹೀಗಿರುವಾಗ **ಪ್ರಾಣಿಚಯವನ್ನೆಲ್ಲಾ ತನ್ನ ನಿಯಮಕ್ಕೊಳಪಡಿಸಿಕೊಂಡಿರುವ ಆ ಶಕ್ತಿಮಯ ನಿಯಮವೇ "ದೇವರು" ಎನ್ನಬಹುದು.**

ಈ ನಿಯಮಕ್ಕೂ ಇದರ ಕರ್ತೃವಿಗೂ ಭೇದವಿಲ್ಲ. ನಿಯಮದ ಕುರಿತಾಗಲೀ, ನಿಯಾಮಕನ ವಿಷಯವಾಗಲೀ, ನಾನು ಜ್ಞಾನವುಳ್ಳವನಲ್ಲವೆಂದ ಮಾತ್ರಕ್ಕೆ "ಆ ನಿಯಮವೂ ಇಲ್ಲ; ಅದರ ಕರ್ತೃವೂ ಇಲ್ಲ" ಎಂದು ಹೆ
ರೆನು. ಆ ಹಳ್ಳಿಯವನು ಮೈಸೂರು ದೇ
ರಾಜನಿಲ್ಲವೆಂದು ತಿಳಿದುಕೊಂಡಿದ್ದರೂ,
ಪ್ರಭುವಿನಾಜ್ಞೆಯನ್ನು ಹೇಗೆ ಉಲ್ಲಂಘಿ
ಯಲಾರನೋ, ಹಾಗೆ ನಾನು ಕೂಡಾ
ವಂತನ ಇರುವಿಕೆಯ ಕುರಿತು ಜ್ಞಾನವಿ
ನೆಂದಾದರೆ, ಭಗವನ್ನಿಯಮವನ್ನು ಅತಿ
ಆಚರಿಸಲಾರೆನು. ನನ್ನ ಅಲ್ಪವಾದ
ವನ್ನೂ ಅಲ್ಪ ಶಕ್ತಿಯನ್ನೂ ಪರಮಾತ್ಮನ
ಜ್ಞತೆ, ಅಮೋಘ ಶಕ್ತಿ ಮತ್ತು ಸರ್ವಶ್ರೇಷ
ದುರು ತೂಗಿನೋಡಿ, ವಿನೀತನಾಗಿ, ವಿ
ನಾಗಿ, ಭಕ್ತಿವಿಶ್ವಾಸಗಳುಳ್ಳವನಾಗಿ ಭ
ನನ್ನು ನಂಬಿ ಪೂಜಿಸಿದ್ದೇ ಆದರೆ, ನನ್ನ ಜೀ
ಸುಗಮವಾಗುವುದು. ಪ್ರಭುವಿನ ಆ
ಸಾರಕ್ಕೆ ಒಳಗಾಗಿ ಜೀವನ ಮಾಡು
ಸುಖವಂತರಾಗಿರುವುದು ಇದಕ್ಕೆ
ಸಾಕ್ಷ್ಯವು.

ಈ ಪ್ರಪಂಚದಲ್ಲಿ ಪ್ರತಿಯೊಂದು
ವೂ ಪ್ರತಿಕ್ಷಣದಲ್ಲೂ ಪರಿವರ್ತಿತವಾ
ಎಂದು ನಾನು ಕಂಡುಹಿಡಿಯಬಲ್ಲೆನು;
ಪರಿವರ್ತನೆಗಳಿಗೂ, ಸೃಷ್ಟಿ, ಸ್ಥಿತಿ,
ಗಳಿಗೂ ಕರ್ತನಾದ ಪರಮೇಶ್ವರನು
ಶಾಶ್ವತನು. ಅವನಿಗೆ ನಾಶವೆಂಬ
ನಮಗೆ ದೃಗ್ಗೋಚರವಾಗುವ ಸಕಲವೂ
ವಾಗುವುವುಗಳು, ಆದರೆ ಭಗವಂತನು
ಸ್ವರೂಪಿಯು.


ದೇವರು ದಯಾವಂತನೋ ದು
ತನೋ ಎಂದು ಪ್ರಶ್ನೆಯಾದರೆ, –
ಸಂಪೂರ್ಣ ದಯಾಸಾಗರನೆಂದು ನನ್ನ ಕ
ಮೃತ್ಯುವಿನಲ್ಲಿ ಅಮೃತತ್ವವೂ, ಅಸ
ಸತ್ಯವೂ, ತಮಸ್ಸಿನಲ್ಲಿ ತೇಜಸ್ಸೂ, ಸ್ಥಿರತೆ
ರುವ ಸಂಗತಿಯು ಎಲ್ಲಿ ನೋಡಿದರೂ
ತ್ತಿರುತ್ತದೆ. 'ಪ್ರಾಣ,' 'ಸತ್ಯ,' 'ಚಿ
ಹಾಗೂ ಪ್ರೇಮ ಇವುಗಳು

ದೇವರೇ. ಆತನೇ ಅತ್ಯುತ್ತಮನೂ ಅಪ್ರಮೇಯನೂ.

ದೇವರ ಇರುವಿಕೆಯ ಕುರಿತು ನಮ್ಮ ಬುದ್ಧಿಯು ಮಾತ್ರ ಸಂತೃಪ್ತಿಗೊಂಡರೆ ಸಾಕಾಗಲಿಕ್ಕಿಲ್ಲ. ನಮ್ಮ ಹೃದಯಾಂತರಾಳದಲ್ಲೂ ಪರಿವರ್ತನೆಯುಂಟಾಗಬೇಕು. ಭಕ್ತನು ತೋರಿಸುವ ಕಿಂಚಿತ್ಸೇವೆಯಲ್ಲೂ ಕೂಡಾ ದೇವರ ಮಹಿಮೆಯು ಕಂಡುಬರಬೇಕು. ಇದಾಗಬೇಕಾದರೆ ನಮಗೆ ಭೌತಿಕೇಂದ್ರಿಯಾದಿಗಳ ಮಾಹಿತಿಯು ಮಾತ್ರ ಸಾಲದು, ಅದಕ್ಕಿಂತ ಹೆಚ್ಚಿನದ್ದು ಅಗತ್ಯವಿದೆ. ಇಂದ್ರಿಯ ಮುಖೇನ ಉಂಟಾಗುತ್ತಿರುವ ಜ್ಞಾನವು ಸತ್ಯಮಯವಾದುದೇ ಸರಿ; ಆದರೂ ಕೂಡಾ ಒಂದೊಂದು ಸಲ ಚಿತ್ತಭ್ರಾಂತಿಯಿಂದಾಗಿ ಅಸತ್ಯ ಮತ್ತು ವೈಪರೀತ ಜ್ಞಾನವುಂಟಾಗುವುದೂ ಇದೆ. ಇಂದ್ರಿಯಕ್ಕೆ ನಿಲುಕದ ಜ್ಞಾನವು ನಿತ್ಯವಾದುದು. ತಮ್ಮ ಹೃದಯಶಕ್ತಿಯ ಮೂಲಕ ಭಗವಂತನನ್ನು ಕಾಣಬಲ್ಲವರ ಬಾಳುವಿಕೆಯಲ್ಲಿ ಆಗಿಹೋದ ಮಾರ್ಪಾಟುಗಳೇ ಈ ಪ್ರತಿಪಾದನಕ್ಕೆ ಸಾಕ್ಷ್ಯವಾಗಿರುತ್ತವೆ.

ಈ ಮಹದ್ಪುರುಷರು ಎಲ್ಲಾ ದೇಶಗಳಲ್ಲಿಯೂ ಎಲ್ಲಾ ಕಾಲಗಳಲ್ಲಿಯೂ ಜನಿಸುತ್ತಲೇ ಇರುವರು. ಈ ತತ್ವಾರ್ಥದ ಸತ್ಯತೆಯನ್ನು ಮಾನವನು ಅಲ್ಲಗಳೆಯುವುದಾದರೆ ಅವನು ತನ್ನ ವ್ಯಕ್ತಿತ್ವವನ್ನೇ ಅವಿಶ್ವಾಸಿಸಿದಂತಾಗುವುದು.

ದೇವರ ಮೇಲೆ ನಿಶ್ಚಲವಾದ ವಿಶ್ವಾಸವು ತಲೆದೋರಿದರೆ ಮಾತ್ರ ಆತ್ಮವಿಕಸಿತತೆಯು ಉಂಟಾಗುವುದು. ಈ ರೀತಿಯ ಭಕ್ತಿ ವಿಶ್ವಾಸದಿಂದಾಗಿಯೇ ಭಕ್ತನು ತನ್ನಂತರ್ಯದಲ್ಲಿ ನೆಲೆಸಿರುವ ಭಗವಂತನ ಪ್ರತಿರೂಪವನ್ನು ಕಾಣಬಲ್ಲನು. ಇಂತಹ ವಿಶ್ವಾಸವನ್ನು ಪುಷ್ಟೀಕರಿಸಲು ಬಹಿಪ್ರ್ರಪಂಚದಲ್ಲಿ ಯೋಗ್ಯ ಪ್ರಮಾಣಗಳು ದೊರೆಯಲಾರವು. ಇದಕ್ಕಾಗಿಯೇ ಭೂಲೋಕವೆಲ್ಲ ಒಂದು ನೈತಿಕ ವಿಚಾರಶಕ್ತಿಯ ಪರಿಪಾಲನೆಗೊಳಗಾಗಿದೆಯೆಂದೂ ಈ ನೈತಿಕ ಶಕ್ತಿಯೇ ಅತ್ಯಮೋಘವಾದುದೆಂದೂ ನಿಶ್ಚಯವಾಗಿ ವಿಶ್ವಾಸಿಸುವುದೇ ಲೇಸು. ಸತ್ಯಕ್ಕೂ ಪ್ರೇಮಕ್ಕೂ ವ್ಯತಿರಿಕ್ತವಾಗಿರುವ ವಿಷಯಗಳನ್ನು ನಂಬದಿರುವುದಕ್ಕಾಗಿ ಅಚಂಚಲ ವಿಶ್ವಾಸವೇ ಉದಾತ್ತವಾದ ಸಲಕರಣೆ. ದೇವರಿರುವನೆಂಬ ನಿರ್ಧಾರವನ್ನು ನಾನು ಕಾರ್ಯರೂಪವಾಗಿ ನಿರೂಪಿಸಲಾರೆನು. ವಿಶ್ವಾಸಶ್ರದ್ಧೆಗಳು ವಿವಾದವನ್ನು ಮೀರಿದಂತಹವುಗಳು. ಅಸಾಧ್ಯ ಸಂಗತಿಗಳನ್ನು ಸಾಧಿಸಲು ಯಾರೂ ಯತ್ನಿಸಬಾರದೆಂಬುದೇ ಎಲ್ಲರಿಗೂ ನನ್ನ ಬೋಧನೆ.



ಭಾರತೀಯರ ಕರ್ತವ್ಯ.

ಲೇಖಕರು:-ಶ್ರೀ। ಕೆ. ಎನ್. ನಾಯಕ್, ಮಂಗಳೂರು.

ಬಡ ಹಿಂದೂದೇಶವು ಅಧೋಗತಿಗಿಳಿಯಲು ಕಾರಣಗಳು ಸಾವಿರವಿವೆ. ಅವುಗಳಲ್ಲಿ "ಬಾಲ್ಯವಿವಾಹ"ವೆಂಬ ಪದ್ಧತಿಯು ಒಂದಾಗಿರುತ್ತದೆ.

ಈ ಪದ್ಧತಿಯು ನಮ್ಮ ಭಗಿನಿವರ್ಗದಲ್ಲಿ ಮಿಲಿಯಗಟ್ಟಳೆ ವಿಧವೆಯರನ್ನುಂಟುಮಾಡಿತು. ಸಾವಿರಗಟ್ಟಳೆ ಕುಟುಂಬಗಳನ್ನು ಅಲ್ಲಸಲ್ಲದ ತೊಂದರೆ ತೊಡಕುಗಳಿಗೊಡ್ಡಿತು. ಲಕ್ಷಗಟ್ಟಳೆ ವಿಧವೆಯವರ ಜೀವನವನ್ನು ಮಣ್ಣುಪಾಲು ಮಾಡಿತು. ದೇಶದಲ್ಲಿ ಸದಾ ಪ್ರಗ್ರತಿಪರ ಮಾರ್ಗದಲ್ಲಿ ಧಾವಿಸುತ್ತಿರುವ ಬಡತನವನ್ನು ಹೆಚ್ಚಿಸಿತು. ಹಾಗಿದ್ದರೂ ಪುರಾಣಮತವಾದಿಗಳು ಇನ್ನೂ ಕಣ್ಣು ತೆರೆದಿಲ್ಲ. ಅವರು ಹೃದಯವನ್ನು ವಿಕಾಸಗೊಳಿಸಲಿಲ್ಲ. ಭಾರತೀಯರಾದ ತಮ್ಮ ಪ್ರಮುಖ ಕರ್ತವ್ಯವೇನೆಂಬುದನ್ನು ಅರಿಯಲಿಲ್ಲ.

ಶಾರದಾ ಕಾನೂನೆಂಬುದು ಸರಕಾರದ ಬೆಂಬಲದಿಂದಾಗಿ ಜ್ಯಾರಿಯಲ್ಲಿದೆಯಾದರೂ, ಅದನ್ನು ಕಾರ್ಯಕ್ಕೆ ಹಚ್ಚದವರು ಈಗಿನ ದಿನಗಳಲ್ಲಿ ಹೆಚ್ಚಾಗುತ್ತಿರುವರು. ಎಲ್ಲೆಲ್ಲಿಯೂ ಬಾಲ್ಯವಿವಾಹಗಳು ಆಗುತ್ತಲೇ ಇವೆ. ಶಾರದಾ ಕಾನೂನು ಜಾರಿಯಲ್ಲಿದ್ದೂ ಇಲ್ಲದಂತಾಗಿದೆ.

ತಮ್ಮ ಮಕ್ಕಳು ಚಿಕ್ಕವರಾಗಿರುವಾಗಲೇ ಅವರ "ತಲೆಗೆ ಅಕ್ಕಿ ಹಾಕಿ" ಅವರನ್ನು ಹರಸಿ ತಾವು ಮೇಲೆ ಹೊರಟುಹೋಗಬೇಕೆಂದು ಕೆಲ ಹೆತ್ತವರ ಆಶೆ. ಹೀಗೆ ಬಾಲ "ವಧೂವರರ" ತಲೆಗೆ ಅಕ್ಕಿಯನ್ನು ಹಾಕುವುದಲ್ಲ; ಕಲ್ಲನ್ನು ಹಾಕುವುದು ಎಂದು ಪ್ರತಿಯೊಬ್ಬ ತಂದೆಯೂ ಪ್ರತಿಯೊಬ್ಬಳು ತಾಯಿಯೂ ತಿಳಿದುಕೊಳ್ಳಬೇಕು. ತಮ್ಮ ಹಸುಗೂಸುಗಳಿಗೆ ಮೂಢತನದಿಂದ ವಿವಾಹಗೈಯ್ಯುವ ಹೆತ್ತವರು ತಮ್ಮ ಮಕ್ಕಳ ಭಾವೀ ಜೀವನವನ್ನು ಸುಖಮಯವಾಗಿ ಮಾಡಲಾರರೆಂದು ದೇಶದ ಪ್ರತಿಯೊಬ್ಬ ಧುರೀಣನ ಮತವಾಗಿರುತ್ತದೆ.

ಹುಡುಗಿಯು ಎಷ್ಟು ಸಣ್ಣವಳಾಗಿಯೇ ಇರಲಿ; ಗಂಡನು ಆಕಸ್ಮಿತ ಘಟನೆಗಳಿಂದಾಗಿ ಮೃತಿಯನ್ನೈದಿದರೆ, ಅವಳು ಒಡನೆ "ವಿಧವೆ"ಯ ವರ್ಗಕ್ಕೆ ಸೇರುವಳು. ಅವಳನ್ನು ಎಲ್ಲರೂ, (ತಂದೆತಾಯಿಗಳು ಕೂಡಾ) ಒಂದು ಅಪಶಕುನದ ಚಿಹ್ನೆಯೆಂದು ಭಾವಿಸುವರು. ಶುಭಕಾರ್ಯಗಳಲ್ಲಿ ಅವಳು ತಲೆಯನ್ನು ಕೂಡಾ ಹೊರತೋರಿಸಬಾರದು. ಹೂ ಮುಡಿದುಕೊಳ್ಳಬಾರದು. ನಗಬಾರದು. ದೇವರ ಪೂಜೆಯ ಕೋಣೆಯನ್ನು ನೋಡಬಾರದು. ಒಟ್ಟಾರೆ, ಅವಳು ಜೀವನ್ಮೃಳಾದಂತೆಯೇ ಸರಿ. ವಿವಾಹ ಮಾಡಿದ ತಪ್ಪು ಯಾರದು? ಅದರ ಪರಿಣಾಮವನ್ನು ಅನುಭವಿಸುವುದಾರು? ಅವಳಿಗೆ ಪುನರ್ವಿವಾಹವನ್ನಾದರೂ ಮಾಡುವರೇ? ಅದೂ ಇಲ್ಲ. ಇಂತಹ ಶಾಸನವನ್ನು ಸ್ತ್ರೀಸಮಾಜದ ಮೇಲೆ ಹೂಡಿದ ಹಿರಿಯರೂ, ಶಾಸ್ತ್ರ ಪುರಾಣಗಳೂ ನಾಶವಾಗಲಿ!

ತಮ್ಮ ಎಳೆಮಕ್ಕಳಿಗೆ ವಿವಾಹವನ್ನು ಅನಿವಾರ್ಯವಾಗಿ ಮಾಡಲೇಬೇಕೆಂದಾಶಿಸುವವರು ವಿವಾಹವೆಚ್ಚವನ್ನು ಒಬ್ಬ ನಂಬಿಗಸ್ಥ ಗ್ರಹಸ್ಥನೊಡನೆ ಠೇವಣಾತಿಯಾಗಿಟ್ಟು ತಾನು ಮರಣಪಟ್ಟರೆ ತನ್ನ ಮಕ್ಕಳಿಗೆ ಆ ಹಣದಿಂದ ಮದುವೆಯನ್ನು ಮಾಡಬೇಕೆಂದು ಹೇಳಬಹುದು. ಅಪ್ರಾಯಸ್ಥ ಮಕ್ಕಳಿಗೆ ಪ್ರಾಯವು ತುಂಬುವ ತನಕ ಹೆತ್ತವರು ಕಾಯುತ್ತಿರಬೇಕು. ಎಂತಹ ಯೋಗ್ಯ ವಧೂವರರೇ ದೊರಕಲಿ, ಮಕ್ಕಳು ಪ್ರೌಢರಾಗದೆ ತಾವು ವಿವಾಹವನ್ನು ಮಾಡಲಾರೆವೆಂದು ದೃಢೀಕರಿಸಿಕೊಳ್ಳಬೇಕು. ಎಂದರೆ ಮಾತ್ರ ನಾವು ಬಾಲ್ಯವಿವಾಹ ಪದ್ಧತಿಯನ್ನು ಆದಷ್ಟು ಶೀಘ್ರದಲ್ಲಿಯೇ ದೇಶದಿಂದ ಹೊಡೆದೋಡಿಸಬಹುದು.

ಇನ್ನು ಪುನರ್ವಿವಾಹದ ವಿಚಾರ. ಮದುವೆಯಾಗಲಿಚ್ಛಿಸುವ ಪ್ರತಿಯೊಬ್ಬ ವಿಧವೆಗೂ ತಕ್ಕ ಪುರುಷನೊಡನೆ ವಿವಾಹವನ್ನು ಮಾಡಬೇಕು. ಪುನರ್ವಿವಾಹದ ಹಕ್ಕು ಹೇಗೆ ಪುರುಷನಿಗೆ ಇದೆಯೋ, ಹಾಗೆ ಅದು ಸ್ತ್ರೀಗೂ ಇದೆ. "Woman's cause is Man's. They rise or sink together" ಎಂದು ಒಬ್ಬ ಆಂಗ್ಲ ಕವಿಯು ಹೇಳಿರುವುದು ಅಕ್ಷರಶಃ ಸತ್ಯವು. ಸ್ತ್ರೀಪುರುಷರು ಐಕ್ಯಮತ್ಯದಿಂದಲೇ ಇರಬೇಕೆಂದು ಅವನ ತಾತ್ಪರ್ಯವು. ಪುರುಷನು ನಾಶವಾದರೆ ಸ್ತ್ರೀಯೂ ನಾಶವಾಗುವಳು. ಅವನು ಉನ್ನತಿಯನ್ನು ಹೊಂದಿದರೆ ಅವಳೂ ಉನ್ನತಿಯನ್ನು ಹೊಂದುವಳು.

ವಿಧವೆಯರನ್ನು ರಕ್ಷಿಸಿ, ಬಾಲ್ಯವಿವಾಹವನ್ನು ನಿಲ್ಲಿಸುವುದೇ ಭಾರತೀಯರ ಆದ್ಯ ಕರ್ತವ್ಯಗಳಲ್ಲೊಂದಾಗಿರುತ್ತದೆ.

++++

ದಾರಿದ್ರ್ಯವೇ ದರಿದ್ರನಾರಾಯಣನು.

ಮನುಷ್ಯನಿಗೆ ಪ್ರಾಮುಖ್ಯವಾದುದಾವುದು?

"Health is Wealth"

ಲೇಖಕರು—ಶ್ರೀಯುತ ಮ. ಜಾ.

ಆರೋಗ್ಯದಿಂದಿರದ ಮನುಷ್ಯನಿಗೆ ಏನಿದ್ದರೂ ಪ್ರಯೋಜನವಿಲ್ಲ. ಅವನ ಹಣಕಾಸು, ಆಸ್ತಿ ಪಾಸ್ತಿಗಳು ಅವನಿಗೆ ಇದ್ದೂ ಇಲ್ಲದಂತೆಯೇ! ನವನಾಗರಿಕತೆಯ ಚಕ್ರದ ತಿರುಗಾಟಕ್ಕೆ ಈಗಿನ ಕಾಲದ ಸಹಸ್ರಾರು ಜನರು ಅನೇಕ ಕಾರಣಾಂತರಗಳಿಂದ ಸಿಲುಕಿ, ತಮ್ಮ ಆರೋಗ್ಯವನ್ನು ಹಾಳುಗೈಯ್ಯುತ್ತಿರುವರು. ಆರೋಗ್ಯವನ್ನು ಕೆಡಿಸುವ ಒಂದು ಪ್ರವೃತ್ತಿಗೆ ಕೈಯಿಕ್ಕುವುದೂ ಸರಿ; ಮನುಷ್ಯನು ಪ್ರಾಣಹತ್ಯೆಗಾಗಿ ದಿನಾಲೂ ಸ್ವಲ್ಪ ಸ್ವಲ್ಪ ವಿಷವನ್ನು ಸೇವಿಸುವುದೂ ಸರಿ.

ಆರೋಗ್ಯವು ಕೆಡುವುದಕ್ಕೆ ಅನೇಕ ಕಾರಣಗಳಿವೆಯಾದರೂ ಎಲ್ಲವುಗಳಿಂತಲೂ ವಿಶೇಷ ಪರಿಣಾಮಕಾರಿಯಾದುದು ಮನುಷ್ಯನು ಸೇವಿಸುವ ಆಹಾರ. ದೇಹವು ಒಂದು ಗಡಿಯಾರ. ಅದರೊಳಗೆ ಸ್ವಲ್ಪ ಕೊಳಕು ಸೇರಿಕೊಂಡಿತೆಂದರೆ ಅದು ಹಾಳಾಗಿ ಬಿಡುವುದು. ಗಡಿಯಾರಕ್ಕೆ 'ಚಾವಿ' ಕೊಡದಿದ್ದರೆ ಅದು ನಡೆಯುವುದಿಲ್ಲವಷ್ಟೆ? ಹಾಗೆ ದೇಹಕ್ಕೆ ಸರಿಯಾದ ಪೋಷಣೆಯು ಸಿಗದಿದ್ದರೆ ಅದೂ ಹಾಳಾಗುವುದು. ದೇಹಪ್ರಕೃತಿಯನ್ನು ಕೆಡಿಸಿಕೊಳ್ಳುವುದು ಸುಲಭ ಆದರೆ ಅದನ್ನು ಸರಿಗೊಳಿಸುವುದು ಬಹು ಕಷ್ಟ.

ರೋಗರುಜನೆಗಳು ಮನುಷ್ಯನ ಅಕ್ರಮ ಮತ್ತು ಅಜಾಗ್ರತೆಗಳಿಂದಲೇ ಬರುತ್ತವೆ. ಊಟ ಉಣಿಸುಗಳಲ್ಲಿ ಒಂದು ನಿಯಮವಿಲ್ಲದೆ, ದೇಹ ಪ್ರಕೃತಿಗನುಸಾರವಾಗಿ ನಡೆಯದೆ, ಸಾವಿರಾರು ಜನರು ಮೃತಿಯನ್ನೈದುತ್ತಿರುವರೆಂದು ಒಬ್ಬ ಸುಪ್ರಸಿದ್ಧ ಡಾಕ್ಟರರ ಅಭಿಮತವಿದೆ. ಈಗಿನ ಕಾಲದಲ್ಲಿ ರೋಗಗಳು ಬರದಂತೆ ತಡೆಯಲೆತ್ನಿಸುವವರು ವಿರಳ. ಅದು ಬಂದು ಅಂಟಿಕೊಂಡ ಮೇಲೆ ಅದರ ನಿವಾರಣಾರ್ಥವಾಗಿ ಇದ್ದ ಡಾಕ್ಟರರ ಕೈಕಾಲು ಹಿಡಿದು ಹೆಣಗಾಡುವವರು ಬಹಳ.

ಐಶ್ವರ್ಯವಂತರಿಗಾದರೋ, ಡಾಕ್ಟರುಗಳ ಬೆಂಬಲವಿದೆ. ತಮ್ಮ (Family Doctors) ಕುಟುಂಬ ವೈದ್ಯರ ಸಹಾಯದಿಂದಲೋ ತಮ್ಮ ಹಣದ ಸಹಾಯದಿಂದಲೋ ಸಿರಿಸಂಪನ್ನರು ತಮ್ಮ ರೋಗರುಜನೆಗಳನ್ನು ನಿವಾರಿಸಲು ಸಮರ್ಥರು. ಬಡವರೇನು ಮಾಡುವರು? ಡಾಕ್ಟರನ ಜೇಬನ್ನು ತುಂಬಿಸಲು ಅವರ ಕೈಯಲ್ಲಿ ಹಣವಿಲ್ಲ. ಮದ್ದುಮಾಯಗಳಿಗೆ ಓಡಲು ಅವರ ಬಳಿ ಜನರಿಲ್ಲ! ಅಂತಹ ಬಡವರು ತಮಗೆ ತಗಲಿರುವ ವ್ಯಾಧಿಗಳನ್ನು ನಿವಾರಿಸಿಕೊಳ್ಳುವುದೆಂತು?

ವೆಚ್ಚವಿಲ್ಲದೆ ನಿರ್ಮೂಲಪಡಿಸಲು ಉಪವಾಸವೊಂದು ಬಹು ಸಾಧನಕಾರಿಯು. ರೋಗನಿವಾರಣೆಯಲ್ಲಿ ಉಪವಾಸದ ಪ್ರಯೋಜನವು ಅಪ್ರತಿಹತವಾಗಿರುತ್ತದೆ. ದೇಹಜಾಡೆಯು ತಗಲಿದ ಚಿಹ್ನೆಯು ಕಂಡುಬಂದೊಡನೆ ಉಪವಾಸವನ್ನು ಕೈಕೊಳ್ಳಬೇಕು. ಉಪವಾಸದಿಂದೇನು ಪ್ರಯೋಜನ? ಅದು ದೇಹಾಂತರ್ಯವನ್ನು ಶುಚಿಗೊಳಿಸುವುದು. ಉದರವು ಒಂದು ದೀಪದಂತಿರುತ್ತದೆ. ದೀಪದಲ್ಲಿ ಎಣ್ಣೆಯು ಬರಿದಾದೊಡನೆ, ಬತ್ತಿಯ ಬೆಂಕಿಯು ಬತ್ತಿಯಲ್ಲಿದ್ದ ಎಣ್ಣೆಯನ್ನು ಹೀರಲುಪಕ್ರಮಿಸುತ್ತದೆ. ಹಾಗೆ ಉಪವಾಸವನ್ನು ಕೈಕೊಂಡರೆ, ಒಂದೆರಡು ಹೊತ್ತುಗಳ ತನಕ ನಾವು ಯಾವುದನ್ನೂ ತಿನ್ನದಿದ್ದರೆ, ನಿತ್ಯವೂ ಕೆಲಸದಲ್ಲೇ ಇರುವ ದೇಹಯಂತ್ರವು ಒಳಗಿದ್ದ ಅಜೀರ್ಣ ವಸ್ತುಗಳನ್ನು ದೀಪವು ಎಣ್ಣೆಯನ್ನು ಹೀರುವಂತೆ, ಚೆನ್ನಾಗಿ ಜೀರ್ಣಿಸುತ್ತದೆ. ಹೊಟ್ಟೆಯನ್ನು ಒಳಗಿನ ಯಂತ್ರವು ತಿಕ್ಕಿ ತೊಳೆದುಕೊಳ್ಳುತ್ತದೆ. ಎಂದೊಡನೆ ಮನುಷ್ಯನಿಗೆ ಸುಖವುಂಟಾಗುವುದು.

ಮನುಷ್ಯನು ನಿದ್ದೆಗೆಡುವುದರಿಂದ ದೇಹಪ್ರಕೃತಿಗೆ ಬಹಳ ಹಾನಿಯಿದೆ. ಮೆದುಳುವು ಪ್ರಾಣವಿದ್ದ ಒಂದು ವಿಚಿತ್ರ ವಸ್ತು. ಅದು ನಮ್ಮ ಕೆಲಸವನ್ನು ಬೇಕುಬೇಕಾದಂತೆ ನಿರ್ವಹಿಸುತ್ತದೆ. ಆದರೆ ಅದಕ್ಕೆ ಅಗತ್ಯವಿದ್ದಾಗ ವಿಶ್ರಾಂತಿಯನ್ನು ಕೊಡದಿದ್ದರೆ ಅದು ಕೆಲಸ ಮಾಡಲೊಲ್ಲದು. ಮೆದುಳನ್ನು ಕೆಲಸ ಮಾಡಿಸಿ ಅದಕ್ಕೆ ತಕ್ಕ ಕಾಲದಲ್ಲಿ ವಿಶ್ರಾಂತಿಯಿತ್ತವನ ಮುಖಭಾವವನ್ನು ನೋಡಿರಿ. ರಾತ್ರಿ ನಿದ್ದೆಗೆಟ್ಟು, ಮೆದುಳಿಗೆ ತುಸು ವಿಶ್ರಾಂತಿಯನ್ನೀಯದವನ ಮುಖದ ತೇಜಸ್ಸನ್ನು ನೋಡಿರಿ. ಎರಡನೆಯವನು ಮೊದಲನೆಯವನೆದುರು ಮೃತಶರೀರಿಯೇ ಸರಿ. ನಿದ್ದೆಗೆಟ್ಟವನ ಕಣ್ಣು ಗುಂಡಿಗೋಡುವುವು. ಅವನ ಮುಖವು ಹಳದಿಯಾಗುವುದು. ಅವನ ಕಣ್ಣು ಪಿತ್ತದೋಷದಿಂದ ಬಾತಿಕೊಳ್ಳುವುವು. ಉಲ್ಲಾಸರಹಿತನಾಗುವನು. ಅವನ ಮನ ಸದಾ ಚಂಚಲವಾಗುವುದು. ಅವನ ವಿ ಸುಖೇಚ್ಛೆಯು ಪ್ರಬಲವಾಗುವುದು. ಮಾಡಿದ ಕೆಲಸದ ನೆನಪು ಮತ್ತಿರಲಾ ಅವನು ಈಗ ಹೇಳಿದ ಮಾತು ಅವನಿಗೆ ತಿಳಿಯಲಾರದು. ಸಂಕ್ಷೇಪವಾಗಿ ವುದಾದರೆ, ಅವನು ಎಚ್ಚರವಿದ್ದ ಹೆಣದಂ ವನು.

ಆಧುನಿಕ ಕಾಲದಲ್ಲಿ ಜನರು ಸುಖ ಭೋಗಗಳಿಗೇನೆ ಮನಸ್ಸನ್ನು ಹೆಚ್ಚಾಗಿ ತ್ತಿರುವುದರಿಂದ ಅವರು ಸ್ವಾಭಾವಿಕವಾಗಿ ಪ್ರಕೃತಿಯನ್ನು ಕೆಡಿಸಿಕೊಳ್ಳಲೇಬೇಕಾಗ ಸಿನೆಮಾ, ನಾಟಕ, ಬಯಲಾಟ, ಜಾತ್ರೆ ಹೆಚ್ಚಾಗಿ ರಾತ್ರೆ ಸಮಯದಲ್ಲೇ ನಡೆಯ ರಿಂದಾಗಿ ಎಷ್ಟೊಂದು ಸಹಸ್ರ ಜನರು ನಿದ್ದೆ ತ್ತಿಲ್ಲ? ಕ್ಷಣಿಕ ಸುಖಗಳಿಗಾಗಿ ತಮ್ಮ ಅ ಲ್ಯವಾದ ಆರೋಗ್ಯವನ್ನು ಹೇಗೆ ಹಾಳುಗೈ ತ್ತಿಲ್ಲ?

ಅನೇಕ ಜನರಿಗೆ ಸುಖವೆಂಬುದೇನ ತಿಳಿಯದು. ದೈಹಿಕ ಮತ್ತು ಮಾನಸಿಕ ವಣಿಗೆಗೆ ಲೇಶಮಾತ್ರವೂ ಗಮನವನ್ನೀ ಎಲ್ಲಾ ವಿಧದ ಭೋಗಗಳನ್ನೂ ಅಕ್ರಮ ಅನುಭವಿಸುತ್ತ ಜೀವನವನ್ನು ನಡೆಸು ಸುಖವೆಂದು ಅವರ ಭಾವನೆ. ಇಂತ ಸಿಗುವುದಾದರೂ ಏನು? ದುಃಖದ ಭಾರ ಹೊರೆ! ಅದರ ಬದಲಿಗೆ ಅವರು, "ದೇ ಒಂದು ಯಂತ್ರ; ಅದನ್ನು ಜಾಗರೂಕತೆಯ ಪೋಷಿಸುತ್ತಿರಬೇಕು' ಎಂದು ತಿಳಿದುಕೊಂ ಮಿತಭೋಗದಲ್ಲಿದ್ದರೆ ಯಾವ ಹಾನಿಯೂ ಲಾರದು. ಮನುಷ್ಯನಿಗೆ ಪ್ರಾಮುಖ್ಯವಾದ ಆರೋಗ್ಯ. ಅವನ ಎಲ್ಲಾ ಅಗತ್ಯಗಳಿ ಆರೋಗ್ಯವೇ ಪ್ರಥಮಸ್ಥಾನವನ್ನು ಹೊ ತ್ತದೆ. ಅದನ್ನು ಕಾಪಾಡುವುದು ಅತ್ಯಗತ್ಯ

+ + + +

ಅತ್ಯುತ್ಕೃಷ್ಟ! ಅತ್ಯುತ್ತಮ!

ಕಾಮಿನಿಯಾ ಟ್ಯೊಲೆಟ್ ಸೋಪ್

ಅದನ್ನು ಉಪಯೋಗಿಸಿದವರಿಗೆ ಅದರ ಪ್ರಾಶಸ್ತ್ಯಿಯೂ,
ಪ್ರಯೋಜನವೂ ತಿಳಿದುಬಾರದಿರದು

ಉತ್ತಮ ತರಗತಿಯ ಬಹು ಬಗೆಯ ಕಾಮಿನಿಯಾ ಸೋಪುಗಳನ್ನೇ ಉಪಯೋಗಿಸಿರಿ

ಕಾಮಿನಿಯಾ ವೈಟ್‌ರೋಸ್ ಸಾಬೂನು, ಕಾಮಿನಿಯಾ ಸೇಂಡಲ್ ಸಾಬೂನು, ಕಾಮಿನಿಯಾ ಟ್ರಾನ್ಸ್‌ಪೇರೆಂಟ್, ಗ್ಲಿಸಿರಿನ್ ಸಾಬೂನು, ಕಾಮಿನಿಯಾ ಲವೆಂಡರ್ ಸಾಬೂನು, ದಿಲ್‌ಬಾರ್ ಸಾಬೂನು

ಈ ಮೇಲಿನ ಎಲ್ಲಾ ಸಾಬೂನುಗಳು ಬಹಳ ಪರಿಮಳಭರಿತವಾಗಿದ್ದು ಉಪಯೋಗಿಸುವಾಗ ಮನಾಹ್ಲಾದವನ್ನುಂಟುಮಾಡುತ್ತದೆ

ಕಾಮಿನಿಯಾ ಸಾಬೂನನ್ನೇ ಉಪಯೋಗಿಸಿರಿ!

ಅದನ್ನು ಅಂಗಡಿಯಿಂದ ಪಡೆಯುವಾಗ ಅದರ ಗುಣ ಮತ್ತು ಶುದ್ಧತೆಯ ಚಿಹ್ನೆಯಾದ "ಕಾಮಿನಿಯಾ" ಎಂಬುದಿದೆಯೋ ನೋಡಿರಿ

3 ತುಂಡುಗಳಿರುವ ಪೆಟ್ಟಿಗೆಗೆ

ರೂಪಾಯಿ **1-0-0.** ವಿ. ಪಿ. ಖರ್ಚು ಪ್ರತ್ಯೇಕ.

ಮಂಗಳೂರು ಏಜಂಟರು—ದಿ ಷಹಾ ಕಂಪೆನಿ, ಮಂಗಳೂರು.

SOLE AGENTS:-

Anglo Indian Drug & Chemical Co.,
155 Jumma Masjid—Market,
P. O. Box 2082 BOMBAY.

ಬಡತನದ ಬಾಳು

ಲೇಖಕರು: ಶ್ರೀ. ಗೋಪಾಲಕೃಷ್ಣ ಅಡಿಗ, ಬೈಂದೂರು.

(ಸ್ವಕಪೋಲಕಲ್ಪಿತ)

ಮಧ್ಯಾಹ್ನದ ಸಮಯ, ಹದಿನೆರಡು ಗಂಟೆಯಾಗಿರಬಹುದು. ಸೂರ್ಯನ ಕಾವಿನಿಂದ ಭೂಮಿಯು ಒಡೆಯುವಂತಿದೆ! ಅಂತಹ ಬಿಸಿಲು! ಈ ವೇಳೆಯಲ್ಲಿ ಕದಿರೆಯ ತಿಮ್ಮಪ್ಪಶೆಟ್ಟರ ಹೊಲದಲ್ಲಿ ೧೪ ವರ್ಷದ ಕೃಶಾಂಗ ಬಾಲಕನೊಬ್ಬನು ಎರಡು ಎತ್ತುಗಳನ್ನು ಓಡಿಸುತ್ತಾ, ಭೂಮಿಯನ್ನುಳುವುದರಲ್ಲಿ ತೊಡಗಿದ್ದನು. ಅವನ ಮೈಯು ಬೆವರಿನಿಂದ ತೋಯ್ದು ಹೋಗಿತ್ತು. ಕೆಸರಿನಿಂದ ತುಂಬಿದ ತನ್ನ ಮೈಕೈಗಳಿಂದ ಪದೇ ಪದೇ ಬೆವರನ್ನು ಒರಸುತ್ತಿದ್ದನು. ಹಸಿವೆಯನ್ನು ತಾಳಲಾರದೆಯೋ ಏನೋ, ಅವನು ಒಮ್ಮೊಮ್ಮೆ ಉಸ್ಸೆಂದು ನಿಟ್ಟುಸಿರನ್ನು ಬಿಡುತ್ತಿದ್ದನು. ಒಮ್ಮೊಮ್ಮೆ ತನ್ನ ಕ್ಲೇಶವನ್ನು ಮರೆಯುವುದಕ್ಕೆಂಬಂತೆ, ಅವನು ಹಳ್ಳಿಯ ತುಂಡು ತುಂಡು ರಾಗಗಳನ್ನು ಹಾಡುತ್ತಿದ್ದನು.

ಇದು ಹಳ್ಳಿಯ ಹುಡುಗನಾದ ಬೋರನೆಂಬ ಬಾಲಕನ ಚಿತ್ರ. ತಂದೆತಾಯಿಗಳನ್ನು ಬಾಲ್ಯದಲ್ಲೇ ಕಳೆದುಕೊಂಡಿದ್ದ ಅವನು ಧನಿಕರಾದ ತಿಮ್ಮಪ್ಪಶೆಟ್ಟರ ಮನೆಯನ್ನು ತನ್ನ ೫ನೇ ವರ್ಷ ಪ್ರಾಯದಲ್ಲೇ ಸೇರಿದ್ದನು. ಅಂದಿನಿಂದ ಇಂದಿನ ವರೆಗೂ ಅವನು ತಿಮ್ಮಪ್ಪ ಶೆಟ್ಟರ ಮನೆಗೆಲಸಗಳಲ್ಲೇ ನಿರತನು.

ಬೋರನು ಬಹಳ ಗುಣವಂತ. ಸಹನಾಶಕ್ತಿ, ಕ್ಲೇಶಸಹಿಷ್ಣುತೆ, ಧೈರ್ಯ ಮೊದಲಾದ ಅಮೋಘಗುಣಗಳು ಅವನಲ್ಲಿ ಮೂರ್ತಿಮತ್ತಾಗಿದ್ದುವು. ಎಂತಹ ಕಷ್ಟ ಕೆಲಸವೇ ಆಗಿರಲಿ, ಅದನ್ನು ತೀವ್ರ ಪ್ರಯತ್ನದಿಂದ ಸಾಧಿಸಿಯೇ ಬಿಡುವನು. ಮನೆಯ ಯಜಮಾನಿ ತಿಮ್ಮಕ್ಕೆಯೂ ತಿಮ್ಮಪ್ಪರೂ ಅವನನ್ನು ಎಷ್ಟು ಬೇಕಾದರೆ ದಣಿಸಲಿ, ಬೋರನು ಅದನ್ನು ಸಹಿಸಿಕೊಳ್ಳುವನು. ಮೂರು ಮೈಲು ದೂರದಲ್ಲಿರುವ ಅಂಗಡಿಗೆ ಹೋಗಿ ಸಾಮಾನು ತರಲು ಶೆಟ್ಟರು ಅವನನ್ನು ಮಧ್ಯರಾತ್ರಿಯಲ್ಲೇ ಕಳುಹಲಿ, ಅವನು "ಕತ್ತಲಾಯಿತು. ಹಾದಿಯಲ್ಲಿ ಹುಲಿ ಹಾವುಗಳಿವೆ. ಹೆದರಿಕೆಯಾಗುತ್ತದೆ" ಎಂದು ಹೇಳಿದವನೇ ಅಲ್ಲ. ಅಂತಹ ಧೀರ ಘೋರನು ಬೋರ.

ದಾಸತ್ವವೆಂಬುದು ಅಸಹನೀಯವಾದ ವೃತ್ತಿಯು. ದಾಸತನದಿಂದ, ಪರರ ಊಳಿಗದಿಂದ, ಜೀವಿಸುವ ಜೀವನವು ವ್ಯರ್ಥ! ಅದನ್ನನುಭವಿಸುವುದಕ್ಕಿಂತ ಮನುಷ್ಯನು ಮರಣಪಟ್ಟರೆ ಲೇಸು. ಯಜಮಾನನು ಎಷ್ಟೇ ಗುಣವಂತನಿರಲಿ; ಊಳಿಗವು ಊಳಿಗವೇ!—ದಾಸನಿಗೆ ಅದರಿಂದ ಕಿಂಚಿತ್ತಾದರೂ ಲೇಸಾಗಲಿಕ್ಕಿಲ್ಲ—ಸುಖ ಪ್ರಾಪ್ತಿಯಾಗಲಿಕ್ಕಿಲ್ಲ.

ರಾತ್ರಿ ಹನ್ನೊಂದು ಗಂಟೆಯ ಸಮಯ. ಮಳೆಯು ಧಾರಾಳವಾಗಿ ಸುರಿಯುತ್ತಿದೆ. ಕಗ್ಗತ್ತಲೆಯೆಂದು ಬೇರೆ ಹೇಳಬೇಕಾಗಿಲ್ಲ. ಹೊಲಗದ್ದೆಗಳಲ್ಲಿ ಕಪ್ಪೆಗಳು "ಟರ ಟರ" ಎನ್ನುತ್ತಿದ್ದುವು. ಅಲ್ಲಲ್ಲಿ ನರಿನಾಯಿಗಳು ಕೂಗುತ್ತಿದ್ದುವು.

ಇಂತಹ ಸಮಯದಲ್ಲಿ ತಿಮ್ಮಪ್ಪಶೆಟ್ಟರ ಮನೆಯ ಬಾಗಿಲಲ್ಲಿ ಬೋರನು ತನ್ನ ಚಾಪೆಯಲ್ಲಿ ಕುಳಿತು ಏನೋ ಆಲೋಚಿಸುತ್ತಿದ್ದನು. ವಾತಾವರಣವು ಬಹಳ ಶೀತಭರಿತವಾದುದರಿಂದ ಅವನು ತನ್ನ ೧॥ ಮೊಳ ವಸ್ತ್ರದ ತುಂಡನ್ನು ಹೊದೆದುಕೊಳ್ಳಬೇಕೆಂದು ಯತ್ನಿಸುತ್ತಿದ್ದನು. ಆದರೆ ಅದು ಸಣ್ಣದಾಗಿದ್ದುದರಿಂದ ಅವನ ಇಡೀ ದೇಹವನ್ನು ಅದು ಮುಚ್ಚಲೊಲ್ಲದು. ಪಾಪ, ದೊಡ್ಡ ತುಪ್ಪಟವನ್ನು ಅವನಿಗೆ ಒದಗಿಸಿಕೊಡುವವರಾರು? ತಂದೆತಾಯಿಗಳಿರುವರೇ? ಬಂಧುಬಳಗಗಳಿರುವುವೇ? ತಿಮ್ಮಕ್ಕೆಯು ಒಳಗೆ ಮಂಚದ ಮೇಲೆ ಮಲಗಿದ್ದಳು. ಅವಳ ನಾಲ್ವರು ಗಂಡು ಮಕ್ಕಳು ತಮ್ಮ ಕೊಠಡಿಯಲ್ಲಿ ಬೆಚ್ಚನೆ ನಿದ್ರಿಸಿದ್ದರು.

ಅಂದು ತಿಮ್ಮಪ್ಪ ಶೆಟ್ಟರಿಗೆ "ಕೋಳಿಕಟ್ಟ"ನ ಉತ್ಸವ! ತನ್ನ "ಮುಲ್ಲೆ" ಕೋಳಿಯೊಂದನ್ನು ಬೆಳಿಗ್ಗೆ ೮ ಗಂಟೆಗೆ ಕೊಂಡುಹೋದವರು ರಾತ್ರಿ ಅಷ್ಟು ಹೊತ್ತಿನ ವರೆಗೂ ಅವರು ಹಿಂತಿರುಗಲೇ ಇಲ್ಲ. ಅದನ್ನು ಕಂಡು ತಿಮ್ಮಕ್ಕೆಯು ಬೋರನನ್ನು ಹೊರಗೆ ಬಾಗಿಲ ಬಳಿ ಕುಳ್ಳಿರಿಸಿ, ಎಚ್ಚರಿರಹೇಳಿ, ಗಂಡನು ಬಂದೊಡನೆ ತನ್ನನ್ನು ಎಚ್ಚರಿಸಬೇಕೆಂದು ಆಜ್ಞಾಪಿಸಿ, ತಾನು ಸ್ವಸ್ಥಚಿತ್ತದಿಂದ ಒಳಗೆ ಮಲಗಿದಳು. ವಾಚಕ ಮಹಾಶಯ! ತಿಮ್ಮಕ್ಕೆಗೂ ಅವಳ ಮಕ್ಕಳುಮರಿಗಳಿಗೂ ಭೋ[illegible] ಬಿಟ್ಟದೆ! ಬೋರನು ಇನ್ನು ತಿಮ್ಮಪ್ಪಶೆಟ್ಟರ ಆಗಮ[illegible] ಮೇಲೆ, ಅವರ ಕೆಲಸಗಳನ್ನು ಮಾಡಿ ಮುಗಿಸಿದ[illegible] ಊಟ ತೀರಿಸಿ ಮಲಗಬೇಕು.

ಶೆಟ್ಟರ ಮತ್ತು ಅವರ ಅಬ್ಬೆಯ ನಿತ್ಯ[illegible] ಪೂಜೆಯು ತನ್ನ ಬಡ ದೇಹದೇವಿಗೆ ಆಗುವುದು ಬೇ[illegible] ಬೋರನು ಬಹಳ ಪ್ರಯಾಸದಿಂದ ಎಚ್ಚರವ[illegible] ಇದ್ದನು. ಆದರೆ ಹಗಲೆಲ್ಲ ದುಡಿದ ದೇಹವವನದು—ಸೂರ್ಯನ ಪೆಟ್ಟು ತಿಂದ[illegible] ನವನು. ಕೂತ ಕೂತ ಹಾಗೆಯೇ, ಅವನನ್ನು ನಿದ್ರಾದೇವಿಯು ಅಪ್ಪಿಕೆ[illegible] ನಿಶ್ಚಿಂತರನ್ನು ಕಂಡರೆ ನಿದ್ರಾದೇವಿಗೆ ಬಹು ಮಮತೆ.

ರಾತ್ರಿ (ಮುಂಜಾನೆ?) ಎರಡು ಗಂಟೆಯು ದಾಟಿಹೋಗಿದೆ. ತಿಮ್ಮಪ್ಪ[illegible] ಏಳುತ್ತಾ, ಬೀಳುತ್ತಾ, ಕೋಳಿಯು ನಷ್ಟವಾದ ಕೋಪವನ್ನು ನುಂಗುತ್ತಾ ಕಾ[illegible] ಮದ್ಯದ ಅಮಲಿನಿಂದ ನಗುತ್ತಾ, ಅಳುತ್ತಾ, ಬೈಯುತ್ತಾ, ಮತ್ತು ಪದ ಹೆ[illegible] ಬರುತ್ತಿದ್ದರು. ತಾನೆಲ್ಲಿರುವೆನೆಂದು ಕೂಡಾ ಅವರು ಮರೆತಂತೆಯೇ ಕಂಡಿತು[illegible]

"Coming events cast their shadows be[illegible]" ಎಂದು ಇಂಗ್ಲಿಷ್ ಗಾದೆಯಿದೆ. ಕೆಲವು ಸಲ ನಮಗೆ ಸನ್ನಿಹಿತವಾಗಲಿರುವ ಸುಖ[illegible]ಗಳ ನೆರಳು ಪೂರ್ವಭಾವಿಯಾಗಿ ನಮ್ಮ ಮನಸ್ಸಿನಲ್ಲಿ ಹೊಳೆಯುವುದುಂಟು. [illegible] ಬೋರನಿಗಾಗುತ್ತಿತ್ತು. ಅವನು ನಿದ್ರಾಪರವಶನಾಗಿದ್ದು ಏನೋ ಕನಸು ಕ[illegible]ದ್ದನು. (ಕಥೆಗಾರರಾದ ನಾವು ಮನುಷ್ಯನ ಕನಸುಗಳನ್ನೂ ತಿಳಿಯಬಲ್ಲೆ[illegible]) ಬೋರನು ಕನಸ್ಸಿನಲ್ಲಿ ಅಳುತ್ತಿದ್ದನು. ತಿಮ್ಮಕ್ಕೆಯು ತನಗೆ ಹಿಡಿಸೂಡಿಯಲ್ಲಿ [illegible]ಯುತ್ತಿದ್ದಂತೆಯೂ, ಅವಳ ಮಕ್ಕಳುಮರಿಗಳು ತನ್ನನ್ನು ಬಲವಾಗಿ ಹಿಡಿದು[illegible] ತಾವೂ ಗುದ್ದು ಹೊಡೆಯುತ್ತಿದ್ದು ತಾಯಿಯಿಂದಲೂ ಹೊಡೆಸುತ್ತಿರುವಂತೆ[illegible] ಅವನಿಗೆ ಕಾಣುತ್ತಿತ್ತು. ತಾನು ಹೊಲದಿಂದ ಸ್ವಲ್ಪ ಬೇಗ ಬಂದುಬಿಟ್ಟು[illegible] ತಿಮ್ಮಕ್ಕೆಯು ಕೋಪಗೊಂಡು ರೌದ್ರಾವತಾರವನ್ನು ತಾಳುವ ಮಹಾರೂಪವೂ[illegible] ಕಣ್ಣಮುಂದೆ ನಿಲ್ಲುತ್ತಿತ್ತು. ತಿಮ್ಮಪ್ಪ ಶೆಟ್ಟರು ತನ್ನನ್ನು ಹೊಡೆಯುವುದಕ್ಕಾಗಿ[illegible] ಮಾಡಿನ ಅಡಿಯಲ್ಲಿ ತೂರಿಸಿಟ್ಟಿದ್ದ ನಾಗಬೆತ್ತವೂ ಬೋರನಿಗೆ ಕನಸ್ಸಿನಲ್ಲಿ ಕಾಣು[illegible] ಒಮ್ಮೆ ಆ ಬೆತ್ತವು ಬೋರನನ್ನು ನೋಡಿ, "ಪ್ರಿಯ ಬೋರಾ, ನಿತ್ಯದ ಮಿ[illegible] ನೀನು ಹೋಗುವೆಯಾ?" ಎಂದು ಪ್ರಶ್ನಿಸಿದಂತೆಯೂ ಭಾಸವಾಯಿತು. ಅ[illegible] "ಅಯ್ಯೋ! ಸತ್ತೆ" ಎಂಬ ಆರ್ತಧ್ವನಿಯು ಬೋರನ ಕಂಠದಿಂದ ಹಾರಿಹೋ[illegible] ಕಾರಣವನ್ನು ತಿಳುಹಿಸಲು ವಿಷಾದವೆನಿಸುತ್ತದೆ—ಮದ್ಯದ ಅಮಲಿನಿಂದ ಉನ್ಮ[illegible] ಹೋಗಿದ್ದ ತಿಮ್ಮಪ್ಪಶೆಟ್ಟರು ಬಾಗಿಲಲ್ಲಿ ನಿಂತು, ಬೋ.......ರಾ; ಭೂ..... ಬೊ......ರಾ ಬಾ......ಗಿ......ಲು ತೆಗೆ" ಎಂದರು. ಆದರೆ ಬೋ[illegible] ನಿದ್ರಾಂಗನೆಯು ಬಿಗಿದಪ್ಪಿಕೊಂಡಿದ್ದಳು. ಶೆಟ್ಟರಿಗೆ ನಿಂತುಕೊಳ್ಳಲಾಗಲಿಲ್ಲ. [illegible] ಪಾದನಂತಿದ್ದ ತನ್ನ ಪಾದವನ್ನು ಅವರು ಜಗಲಿಗಿಟ್ಟರು. ಕಾಲಿನಲ್ಲಿದ್ದ ಮ[illegible] ಕದಲಿಸಲೂ ಇಲ್ಲ. ಕಾಲಿಟ್ಟಲ್ಲಿ ಅವರಿಗೆ ಏನೋ ತಾಗಿದಂತೆ ಭಾಸವಾ[illegible] ಆದರೆ ಮದಿರಾದೇವಿಯು ಜಾಗ್ರತಳಲ್ಲವಷ್ಟೆ! ಅವರು ಬೋರನ ಕಂಠದ [illegible] ಕಾಲಿಟ್ಟು ದೃಢವಾಗಿ ನಿಂತುಬಿಟ್ಟರು! ಮೊದಲೇ ಅನ್ನನೀರಿಲ್ಲದ ಕೃಶದೇಹ. [illegible]ರಲ್ಲೂ ಶೆಟ್ಟರು ಬೋರನ ಕುತ್ತಿಗೆಯ ಮಧ್ಯೆ ಕಾರ್ಕಳ ಗೋಮಟೇಶ್ವರನಂತೆ[illegible]ದ್ದಾರೆ. ಮತ್ತೂ ಕರೆಯುತ್ತಾರೆ, "ಬೋ——ರ, ಬೋರ"—ಬೋರನಿಲ್ಲ.

ಸುಖಕನಸನ್ನನುಭವಿಸುತ್ತಿದ್ದ ತಿಮ್ಮಕ್ಕೆಗೆ ತಟ್ಟನೆ ಎಚ್ಚರವಾಯಿತು. ಖಜಾನೆಯೊಳಗಿನ ಹಣದ ರಾಶಿಯನ್ನು ಕನವರಿಸುತ್ತಿದ್ದ ಅವಳು, ಅದರ ಕ[illegible]ಯಿತೋ ಎಂದು ದಿಗಿಲುಗೊಂಡಳು. ಆದರೆ ಹೊರಗೆ ಗಂಡನ ಆರ್ಭಟವಾಗು[illegible]ವುದನ್ನು ಕೇಳಿ ಎದ್ದುಕೊಂಡಳು. ಗಂಡನು 'ಜೂಜಿ'ನಲ್ಲಿ ದೊರೆತ ಕೋಳಿ[illegible] ತಂದಿರುವನೆಂದು ನೆನಸಿ, ಉಲ್ಲಾಸಗೊಂಡಳಾದರೂ, ಅವಳು ಬೋರನ ದಿಟ್ಟತನ[illegible]

ಅವನು ಮಲಗಿ, ಯಜಮಾನರನ್ನು ಸ್ವಾಗತೀಕರಿಸದಿದ್ದುದಕ್ಕೆ ಕುಪಿಸಿಕೊಂಡಳು. ಮೂಲೆಯ ಕಸಬರಿಕೆಯನ್ನು ತೆಗೆದುಕೊಂಡು ಬಾಗಿಲ ಚಿಳಕ ತಪ್ಪಿಸಿ ಹೊರಗೆ ಬಂದು, "ಮಾರಿ ಬರಲಿಕ್ಕೆ ನಿನಗೆ! ಏಳು, ನಿನಗೆ ಭಾರಿ ನಿದ್ರೆಯೋ?" ಎಂದು ಹೇಳುತ್ತಾ ಬೋರನಿಗೆ ತಟಪಟನೆಂದು ಬಡೆಯಲಾರಂಭಿಸಿದಳು. ದೀಪದ ಮಿಣಿಮಿಣಿ ಬೆಳಕು—ಕತ್ತಲೆಯ ಕವಚ. ತಿಮ್ಮಕ್ಕೆಗೇನು ಕಂಡೀತು? ಅವಳು ಕೋಪಾಟೋಪದಿಂದ ಬೈಯುತ್ತಾ, ಬೋರನನ್ನು ಎಚ್ಚರಿಸದಿರೆನೆಂದು ಹೊಡೆಯುತ್ತಾ ಇದ್ದಳು. "ಏಳು, ಇಷ್ಟು ಪೆಟ್ಟು ಬಿದ್ದರೂ ಇನ್ನೂ ನಿದ್ದೆಯೇ, ಮುಂಡೆ ಮಗಾ, ನಿನಗೆ ದಿನಾಲೂ ಇಷ್ಟಿಷ್ಟು ಬೀಳದಿದ್ದರೆ, ನೀನು ನಮ್ಮನ್ನು ಮಾರುವಿ!" ಎನ್ನುತ್ತ ಹೊಡೆಯುತ್ತಿದ್ದಳು.

ತಿಮ್ಮಪ್ಪಶೆಟ್ಟರು ಮಾಲುತ್ತಾ ಒಳಗೆ ಹೋಗಿ, ವಸ್ತ್ರ ಮುಂಡಾಸುಗಳನ್ನು ಕಳಚಿ "ಅನ್ನ ಹಾಕೇ" ಎಂದು ತಿಮ್ಮಕ್ಕೆಯ ಬಳಿ ಸಾರಿದರು. ಅವಳು ಬೋರನಿಗೆ ಪೆಟ್ಟು ಕೊಡುತ್ತಿದ್ದಲ್ಲಿಗೆ ಬಂದು, ಮದಾಂಧತೆಯಿಂದ ತಿಮ್ಮಕ್ಕೆಯನ್ನು ಬಲವಾಗಿ ಅಪ್ಪಿಕೊಂಡು, "ಬಿಡು, ನಾನವನನ್ನು ಎಬ್ಬಿಸುತ್ತೇನೆ"ಂದು ಪೌರುಷದಿಂದ ಹೇಳಿ, ಮಾಡಿನ ಬೆತ್ತವನ್ನು ತೆಗೆದು, ತಂದು, ರಪ್! ರಪ್! ರಪ್‌ರಪ್‌ರಪ್!!! ಎಂದು ಪೆಟ್ಟುಕೊಟ್ಟರು. ಆದರೆ ಪಾಪ, ಬೋರನೆಲ್ಲಿರುವನೆಂದು ಇವರೆಂತು ತಿಳಿದಾರು? ರೋಷಕ್ಕೂ ಶರಾಬಿಗೂ ವಿಚಾರವುಂಟೇ?

ಶೆಟ್ಟರು ಬೋರನನ್ನು ಎತ್ತಿದರು. ಮತ್ತೆರಡು ಪೆಟ್ಟುಕೊಟ್ಟರು. ಅಷ್ಟರಲ್ಲಿ ಅವರ ಕೈಗೆ ಅಂಟು ಏನೋ ತಗಲಿದಂತೆ ಭಾಸವಾಯಿತು. "ಛಿ! ಸಗಣಿ!" ಎಂಬರು ತನ್ನ ಬಿಳಿ ವಸ್ತ್ರಕ್ಕೆ ಒರಸಿಕೊಂಡರು—ನೋಡುತ್ತಾರೇನನ್ನು? ಅದು ಸಗಣಿಯಲ್ಲ—ಗಟ್ಟಿಕಟ್ಟಿದ ರಕ್ತ!!!


ಶೆಟ್ಟರ ಮಧು ಮತ್ತು ಕೋಪದ ಉದ್ರೇಕಕ್ಕೆ ಮಂಜಿನ ಗಡ್ಡೆಯನ್ನಿಟ್ಟಂತಾಯಿತು. ದೀಪವನ್ನು ತರಿಸಿ ನೋಡುತ್ತಾರೇನನ್ನು? ತಿಮ್ಮಕ್ಕೆಯ ಮೈತುಂಬಾ ರಕ್ತ! ಹಿಡಿಸೂಡಿಯು ರಕ್ತಮಯು!!! ಶೆಟ್ಟರ ವಸ್ತ್ರವೆಲ್ಲಾ ನೆತ್ತರಿನಿಂದ ತುಂಬಿದೆ!! ಬೋರನ ಬಾಯಿಯಿಂದ ರಕ್ತವು ಧಳಧಳನೆ ಹರಿಯುತ್ತಿತ್ತು.

ಮನುಷ್ಯನು ಎಷ್ಟಾದರೂ ಬಳಲಲಿ. ಅದರಿಂದ ಸರಕಾರಕ್ಕೆ ಬೇಸರವಿಲ್ಲ. ಆದರೆ ಅಂತಹ ಬಳಲುವಿಕೆಯಿಂದ ಯಾರಾದರೂ ಸತ್ತರೆಂದರೆ, ಸರಕಾರವು ಒಡನೆ ಬರುವುದು. ಬೋರನ ವಿಷಯದಲ್ಲೂ ಹಾಗೆಯೇ ಆಯಿತು ತಿಮ್ಮಪ್ಪ ಶೆಟ್ಟರ ಮೇಲೆ ತಪ್ಪು ಸ್ಥಾಪಿತವಾಗಿ ತಕ್ಕ ಶಿಕ್ಷೆಯನ್ನು ವಿಧಿಸಲಾಯಿತು. ತಿಮ್ಮಕ್ಕೆಯನ್ನು ಬಿಟ್ಟುಬಿಟ್ಟರು.

ಹಾ! ಬೋರಾ ನಿನ್ನಂತಹ ಬಾಲಕರು ಹಳ್ಳಿಗಳ ಧನಿಕರ ಊಳಿಗದಿಂದ ಎಷ್ಟೊಂದು ಬಳಲುವುದಿಲ್ಲ! ಅವರನ್ನು ಕೇಳುವವರಿದ್ದಾರೆಯೇ?

ಗಾಂಧೀ ತತ್ವ.

೧. ಪಾವನನು ಪತಿತವರ್ಗದವರೊಡಗೂಡಿ, ಭೋಜನ ಮಾಡಿದರಾಗಲಿ, ವಿವಾಹ ವಾದರಾಗಲೀ, ಅವನ ಅಜನ್ಮಸಿದ್ಧ ಹಕ್ಕಾದ ಪಾವನತ್ವವು ನಾಶವಾಗಲಾರದು.
೨. ನನಗೆ ಮೂರ್ತಿಪೂಜೆಯ ಮೇಲೆ ನಂಬಿಕೆಯಿದೆ. ಗೋರಕ್ಷಣೆಯ ವಿಶಾಲವಾದ ಅರ್ಥದ ಮೇಲೂ ಭರವಸೆಯಿದೆ.
೩. ನೀನು ಅಹಿಂಸಾಮಯನಾಗಿ ಸತ್ಯಶೋಧನೆಯನ್ನು ಮಾಡು. ಆಗ ಮಾತ್ರ ಹಿಂದೂ ಧರ್ಮವೇನೆಂದು ತಿಳಿದುಬಂದೀತು.
೪. ನಾನು ಮುಸಲ್ಮಾನನ ಮನೆಯಲ್ಲೂ ಉಣ್ಣುವೆನು. ಕಾರಣ — ಆಹಾರದ ವಿಷಯವಾಗಿ ನನ್ನ ಖಂಡಿತವಾದ ಬಂಧನರೂಪದ ನಿಯಮಗಳಿವೆ.
೫. ನೀನು ಅಹಿಂಸಾಮಯನಾಗಿ ಸತ್ಯಶೋಧನೆಯನ್ನು ಮಾಡು. ಆಗ ಮಾತ್ರ ಧರ್ಮವೇನೆಂಬುದು ತಿಳಿದು ಬಂದೀತು.



ಬೆಂಗಳೂರಿನ ಶ್ರೀ. ಎ. ಎನ್. ಸೂರ್ಯನಾರಾಯಣ ರಾವ್
ಇವರಿಂದ ವಿರಚಿಸಲ್ಪಟ್ಟ

"ಖಾದಿಯ ಮಹಿಮೆ"

ಎಂಬ ಸಚಿತ್ರ ಪುಸ್ತಕವು ನಮ್ಮ ಹಸ್ತಗತವಾಗಿದೆ. ಕ್ರೌನ್ ⅛ ಸೈಜಿನದ್ದು. ಮುದ್ದಾದ ಮುದ್ರಣ ಮತ್ತು ಉತ್ತಮ ಕಾಗದದಿಂದ ರೂಪಿತವಾಗಿದೆ.

ಬೆಲೆ ಕೇವಲ ೧ ಆಣೆ. ಕಲಾ ಮಂದಿರ, ಬೆಂಗಳೂರು ನಗರ, ಇಲ್ಲಿ ಸಿಗುತ್ತದೆ.

ಇದರಲ್ಲಿ ಲೇಖಕರು ಖಾದಿಯ ಮಹಿಮೆಯನ್ನು ಅತ್ಯುತ್ತಮವಾಗಿ, ಸ್ಫೂರ್ತಿಯಿಂದ ವಿವರಿಸಿರುತ್ತಾರೆ. ಮುನ್ನುಡಿಯಲ್ಲಿ ಶ್ರೀ ಸಂಪಿಗೆ ವೆಂಕಟಪತಯ್ಯನವರೆಂದಂತೆ "ಹೊನ್ನಿನ ನಾಡಾದ ಹಿಂದೂಸ್ಥಾನವು ಇಂದು ಮಣ್ಣಿನ ಪಾಲಾಗಿ ದುಃಸ್ಥಿತಿಗಿಳಿಯಲು ಕಾರಣವೇನೆ"ಂದು ಗ್ರಂಥದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಪರಕೀಯರು ಹಿಂದೂದೇಶದ ಹತ್ತಿ ಮತ್ತು ಬಟ್ಟೆವ್ಯಾಪಾರಗಳಿಗೆ, ಮಾಡಿದ ಘಾತ, ನಮ್ಮ ಪ್ರಾಚೀನ ವೈಭವ, ವಸ್ತ್ರ ತಯಾರಿಯಲ್ಲಿ ಪ್ರಖ್ಯಾತರಾಗಿದ್ದ ನಮ್ಮವರು ಕೈಗಟ್ಟಲ್ಪಟ್ಟಂತಾಗಿ ವ್ಯಾಪಾರದಲ್ಲಿ ಅಧೋಗತಿಗಿಳಿದ ಕಾರಣ, ಮೊದಲಾದವುಗಳು ಇದರಲ್ಲಿ ವರ್ಣಿಸಲ್ಪಟ್ಟಿವೆ. ಮಹಾತ್ಮಾಗಾಂಧಿಯವರು ನೂಲುತ್ತಿರುವಾಗ, ಭಾರತ ಮಾತೆಯು ಹಿಂದಿನಿಂದ ಉದಯಿಸುತ್ತಿರುವ ಚಿತ್ತಾಕರ್ಷಕವಾದ ಚಿತ್ರವೊಂದು ಇದರಲ್ಲಿದೆ. ಅಲ್ಲದೆ ಪ್ರಾಚೀನ ಭಾರತದವ್ಯವಸ್ಥೆ, ಇಂದಿನ ಭಾರತದ ದುರವಸ್ಥೆ, ಹತ್ತಿಯ ಕಾಳು ಬಿಡಿಸುವ ರಾಟೆ, ಸಾಧಾರಣ ಬಿಲ್ಲು—ಬರಡೋಲಿ ಬಿಲ್ಲು, ತಕಲಿಯನ್ನು ತಿರುಗಿಸುವ ಕ್ರಮ, ನೂಲು ಸುತ್ತುವ ಸಲಕರಣೆಗಳು, ತಕಲಿಯಲ್ಲಿ ನೂಲು ತೆಗೆಯುವ ಕ್ರಮ, ದಾರದಂಡೆಯನ್ನು ರಚಿಸುವ ಕ್ರಮ, ಉತ್ತಮವಾದ ಚರಕ ಮೊದಲಾದುವುಗಳ ಲೈನ್ ಬ್ಲೋಕ್ ಚಿತ್ರಗಳಿವೆ. ಖಾದಿ ಪ್ರಚಾರವು ಭರದಿಂದ ಸಾಗುತ್ತಿರುವ ಈ ಸಮಯದಲ್ಲಿ ಈ ಪುಸ್ತಕವನ್ನು ಪ್ರತಿಯೊಬ್ಬರೂ, ಮುಖ್ಯತಃ ನಮ್ಮ ವಾಚಕರೆಲ್ಲರೂ ಅತ್ಯಗತ್ಯವಾಗಿ ತರಿಸಿ ಓದಿಕೊಳ್ಳಲೆಂದು ನಾವು ಹಾರೈಸುತ್ತೇವೆ. ರಚಯಿತರು ಇದನ್ನು ತಯಾರಿಸಲು ಹೆಚ್ಚಿನ ಸಾಧನಗೈದಿರುವರೆಂದು ಸ್ಫುಟವಾಗಿ ಕಂಡುಬರುತ್ತದೆಯಾದರೂ, ಅವರು ಇದರ ಬೆಲೆ ಬರೇ ಒಂದಾಣೆಯಾಗಿಟ್ಟದ್ದರಿಂದ ಕರ್ಣಾಟಕಕ್ಕೆ ಮಹದುಪಕಾರ ಮಾಡಿದಂತಾಯಿತು.

ಇದನ್ನು ಓದಿದ ಎಂತಹ ವಿದೇಶಿ ಪುರಸ್ಕರ್ತನೂ ಸ್ವದೇಶಿ—ಖಾದಿ ಧರಿಸಿಕೊಳ್ಳುವೆನೆಂದು ಪ್ರತಿಜ್ಞೆಯನ್ನು ಮಾಡದಿರಲಿಕ್ಕಿಲ್ಲ; ಅಂತಹ ಭಾವೋದ್ರೇಕಪರತೆಯಿಂದ, ಉಚ್ಚ ಕಾರಣಸಹಿತವಾಗಿ ಬರೆಯಲ್ಪಟ್ಟಿದೆ. ದೇಶದ ಕಡೆಗೆ ನಮ್ಮ ಕರ್ತವ್ಯವೇನು? ಗಿರಣಿ ವಸ್ತ್ರಗಳ ಅವಸ್ಥೆಯೇನು? ಖಾದಿಯೆಂದರೇನು? ಆಬಾಲವೃದ್ಧರು ಏಕೆ ನೂಲಬೇಕು? ಎಂಬ ಅನೇಕ ಪ್ರಶ್ನೆಗಳಿಗೆ ಇದರಲ್ಲಿ ತಕ್ಕ ಉತ್ತರವಿದೆ. ಪ್ರಚಾರಕಾರ್ಯಕ್ಕಾಗಿ ಹೊರಡುವ ಖಾದೀ ಪ್ರೇಮಿಗಳೂ ಬೈ ಇಂಡಿಯನ್ ಸಂಸ್ಥೆಯವರೂ ಈ ಪುಸ್ತಕವನ್ನು ಪಡೆದು ಪ್ರಚಾರಕಾರ್ಯದಲ್ಲು ಪಯೋಗಿಸುವರೆಂದು ನಂಬುವೆವು. ಪ್ರಚಾರಕಾರ್ಯಕ್ಕಾಗಿ ಹಂಚುವವರಿಗೂ ವ್ಯಾಪಾರಿಗಳಿಗೂ ೧೦೦ ಪುಸ್ತಕಗಳಿಗೆ ೫ ರೂಪಾಯಿಗಳು ಮಾತ್ರ. ಪ್ರತಿ ಕನ್ನಡಿಗನು ಇದನ್ನು ಓದಲೆಂದು ಪುನಃ ಹಾರೈಕೆ.

ಕಮಲಾಕರನ ಬೋಂಬು!

ಲೇಖಕರು:— ಶ್ರೀ ಎಸ್. ಸುಂದರರಾವ್, ಮಂಗಳೂರು.

ಬೆಂಗಳೂರು,
೨—೪—೧೯೩೨.

ಮ। ರಾ। ರಾ। ರಾಮುರಾಯರಿಗೆ.

ಸ್ವಾಮಿ, ನಾನು ಅನ್ಯಗತಿಕನಾಗಿ ಬೆಂಗಳೂರಿಗೆ ತೆರಳಿದ್ದ ಸಂಗತಿಯು ತಮಗೆ ವಿದಿತವಿದೆಯಷ್ಟೆ! ಇಲ್ಲಿ ಬಂದು ತಲ್ಪಿದೊಡನೆಯೇ ನನ್ನ ಭಾಗ್ಯದೇವತೆಯು ನಕ್ಕುಬಿಟ್ಟಳು — ನನಗೆ ಇಲ್ಲಿನ ಓಲ್ ಇಂಡಿಯಾ ಮಿಲ್ಲಿನ ಮ್ಯಾಲಿಕರೊಬ್ಬರ ಸ್ನೇಹಲಾಭವಾಗಿ, ಅವರ ಕುರುಣೆಯಿಂದ ಈಗ ಒಂದು ಸದುದ್ಯೋಗವು ಲಭ್ಯವಾಗಿದೆ. ೩೫೦ ರೂಪ್ಯಾ ಸಂಬಳ ತಿನ್ನುವ ಮಿಲ್ ಸೆಕ್ರೆಟರಿಯು ನಾನಾಗಿರುತ್ತೇನೆ. ಈಗಲೂ ನನಗೆ ಲಲಿತೆಯ ನೆನಪುಂಟಾಗುತ್ತದೆ. ಆದರೆ ಬಡವನಿಗೆ ಹೆಣ್ಣು ಕೊಡೆನೆಂದು ನೀವು ಮೊದಲೇ ಹೇಳಿರುವಿರಿ! ನಾನು ಬೇಗನೇ ಊರಿಗೆ ಬರುವವನಿದ್ದೇನೆ. ನನ್ನ ಹರಕು ಮುರುಕು ಗುಡಿಸಲನ್ನು ನೋಡಬೇಕೆಂಬ ಮನಸ್ಸಾಗಿದೆ.

ಇಂತಿ ತಮ್ಮ
ಕಮಲಾಕರ.

ರಾಮುರಾಯರು ಕಮಲಾಕರನ ಈ ಪತ್ರವನ್ನು ಮೂರು ಮೂರು ಸಲ ಓದಿ ನೋಡಿದರು. ಅರ್ಥವು ಭಿನ್ನವಾಗಿರಲಿಲ್ಲ. ಮನದಲ್ಲೇಕೋ ಒಮ್ಮೆ ಕಳವಳಗೊಂಡರು — ಬೆರಳು ಕಚ್ಚಿದರು. ಹಿಂದೊಮ್ಮೆ ಕಡುಬಡವನಾಗಿದ್ದ ಕಮಲಾಕರನು ತನ್ನಲ್ಲಿ ಆಶ್ರಯವನ್ನು ಯಾಚಿಸಿ ಬಂದಿದ್ದಾಗ, ಅವನಿಗೆ ತಾನು ಬೈದಿದ್ದ ಸಂಗತಿಯು ಅವರ ಸ್ಮರಣೆಗೆ ಬಂತು. ಅಂದು ಅವನನ್ನು ತಿರಸ್ಕರಿಸಿದುದಕ್ಕಾಗಿ ಇಂದು ಪಶ್ಚಾತ್ತಾಪಗೊಂಡರು.

ರಾಮುರಾಯರು ಒಬ್ಬ ಧನಿಕರಿದ್ದರು. ಸ್ವಲ್ಪ ಅಹಂಭಾವದವರು. ಸಾಧಾರಣವಾದ ಬಡಜನರನ್ನು ಕಂಡರೆ ಅವರಿಗೆ ಬೀದಿನಾಯಿಗಳನ್ನು ಕಂಡಂತಾಗುತ್ತಿತ್ತು. ಅವರು ಲೋಕದಲ್ಲಿ ಅಸಹ್ಯವಾಗಿ ಕಾಣುತ್ತಿದ್ದುದೆಂದರೆ, ಬಡವರನ್ನು ಮಾತ್ರ! ಯಾರಲ್ಲಿ ಹಣವಿಲ್ಲವೋ, ಅವರು ರಾಮುರಾಯರಿಗೆ ಮುರಕಲ್ಲು. ಯಾರು ಧನಿಕರೋ ಅವರು ಅವರಿಗೆ ರತ್ನ — ಅಂತಹ “ಸಾಧ್ವಿ” ಅವರು.

ಅವರ ಈ ಗುಣವನ್ನು ನೆಲಕ್ಕಪ್ಪಳಿಸುವುದಕ್ಕಾಗಿಯೋ ಎಂಬಂತೆ, ಅವರಿಗೆ ಒಬ್ಬಳು ಪುತ್ರಿ. ಮದುವೆಗೆ ಬೆಳೆದವಳು. ಅವಳಿಗಾದರೋ ಸಮ್ಯಕ್ವ್ಯಕ್ತಿಗಳನ್ನು, ಸಜ್ಜನರನ್ನು, ದೀನರನ್ನು ಕಂಡರೆ ಬಹು ಮಮತೆ, ನೆರೆಕರೆಯಲ್ಲಿ ಯಾರಾದರೂ ಬಳಲುತ್ತಿರುವರೆಂದರೆ, ಅವಳ ಹೃದಯವು ಕರಗಿ ನೀರಾಗುತ್ತಿದ್ದಿತು—ಚಡಪಡಿಸುತ್ತಿದ್ದಿತು. ಅವರನ್ನುದ್ಧರಿಸಬೇಕೆಂದೇ ಅವಳ ಹಟ! ಅದಕ್ಕಾಗಿಯೇ ಲಲಿತೆಯನ್ನು ಅವಳ ನೆರೆಕರೆಯ ಹೆಂಗುಸರು “ಧಾತ್ರಿ ಲಲಿತೆ” ಎಂದು ಕರೆಯುತ್ತಿದ್ದರು.

ನೆರೆಹೊರೆಯಲ್ಲೇ ಇದ್ದ ಕಮಲಾಕರನಿಗೆ ಲಲಿತೆಯ ಪ್ರೇಮಕಿರಣಗಳು ಕಂಡುವು. ಲಲಿತೆಗೂ ಅವನ ಉಜ್ವಲ ಪ್ರೇಮ ಪ್ರಕಾಶವು ತೋರಿಬಂತು. ಇಬ್ಬರನ್ನೂ ಪ್ರೇಮಪಾಶವು ಬಿಗಿಯಿತು.

ಕೆಲವು ವರ್ಷಗಳು ದಾಟುತ್ತಲೇ ಕಮಲಾಕರನ ಹೆತ್ತವರು ಪರಂಧಾಮವನ್ನೈದಿದರು. ಬಡತನದ ಆಘಾತದಿಂದ ಬುದ್ಧಿಕಲಿಯಲು ಕಮಲಾಕರನನ್ನು ಬಿಟ್ಟುಹೋದರು. ಅವನು ಬಹು ಕಷ್ಟಪರಂಪರೆಗಳನ್ನನುಭವಿಸಿದ. ಹೇಗೋ ರಾಮುರಾಯರ ಬಳಿ ಸೇರಿ ಆಶ್ರಯವನ್ನು ಬೇಡಿದ. ಆದರೆ ರಾಯರು ಬಡವರನ್ನು ಕಾಣುವ ದೃಷ್ಟಿಯು ಯಾವುದೆಂದು ಮೊದಲೇ ಹೇಳಿದೆಯಷ್ಟೆ.—ಕಮಲಾಕರನಿಗೆ ತಿರಸ್ಕಾರದ ಶೂಲವು ಚುಚ್ಚಲ್ಪಟ್ಟಿತು. ಊರು ಬಿಟ್ಟು ಓಡಿದ. ದೈವವಶಾತ್ “ಘನ ಉದ್ಯೋಗಸ್ಥನಾದ.” ಆದರೆ ಅವನು ಲಲಿತೆಯನ್ನು ಮರೆಯಲಿಲ್ಲ. ಪತ್ರಮುಖೇನ ಅವನು ಅವಳ ಬಳಿಯಲ್ಲೇ ಇದ್ದ. ಅವಳೂ ಹಾಗೆಯೇ ಅವನಿಗೆ ಎರಡು ದಿವಸಗಳಿಗೊಮ್ಮೆ ಒಂದು ಪತ್ರವನ್ನು ಬರೆಯುತ್ತಿದ್ದಳು. ಈ ಗುಟ್ಟು ಬೇರಾರಿಗೂ ತಿಳಿದಿದ್ದಿಲ್ಲ.

ರಾಮುರಾಯರು ಕಮಲ[...] ಪತ್ರವನ್ನು ತನ್ನ ಹೆಂಡತಿಗೂ ಮ[...] ತೋರಿಸಿದರು. ಪತ್ನಿಯೊಡನೆ [...] ಒಂದು ವಿಷಯವನ್ನು ಗುಟ್ಟಿನಿಂದ[...] ದರು.

× × ×

ಆದಿತ್ಯವಾರ ದಿನ. ಕಮಲಾ[...] ತನ್ನ ಪತ್ರದ ಮೇರೆಗೆ ಇಂದು ಬೆಂಗಳೂರಿನಿಂದ ಮಂಗಳೂರು ರೈಲ್ವೇ ನಿಲ್ದಾ[...] ಇಳಿದಿದ್ದನು. ಅವನ ಗುರುತು ಯಾರಿಗಾದರೂ ಫಕ್ಕನೆ ಆಗುವಂತಿದ್ದಿಲ್ಲ. [...] ಬೂಟ್, ಕೋಟ್ ಹಾಕಿ ಕಣ್ಣಿಗೆ ಕನ್ನಡಕವನ್ನಿಟ್ಟು ಒಳ್ಳೆ ಅಚ್ಚುಮೆಚ್ಚಾಗಿ ಕಾಣು[...]

ಐಶ್ವರ್ಯವಂತರಿಗೆ ಅಭಿಮಾನವು ಹೆಚ್ಚು. ಆದರೆ, ಸಮಯದಲ್ಲಿ ಅವ[...] ಮಾರಲೂ ಸಿದ್ಧರಿರುತ್ತಾರೆ. ಒಂದು ವೇಳೆ ಅವರದನ್ನು ಮಾರಿದರೂ ಅ[...] ನೋಡಿ ‘ಛೆ’ ಎನ್ನುವವರಿಲ್ಲ. ಹಾಗೆಂದು, ಬಡವನು ತನ್ನ ಕಿಂಚಿತ್ ಗೌ[...] ಹಾನಿತಟ್ಟುವ ಕೆಲಸವನ್ನು ಮಾಡಲಿ! — ಎಲ್ಲರೂ ಅವನನ್ನು ನೋಡಿ ‘ಕೇಕೆ[...] ವರು. ರಾಮುರಾಯರು ತನ್ನ ಅಭಿಮಾನವನ್ನು ಮಾರಿಯೇ ಬಿಟ್ಟರು. ನನ್ನ [...] ವನ್ನು ಮಣ್ಣುಪಾಲಾಗಿ ಮಾಡಿ, ಅಂದು ತಾನು ಮನೆ ಬಾಗಲಿನಿಂದ ದೂಡಿಬ[...] ಕಮಲಾಕರನನ್ನು ಸ್ಟೇಶನಿನಲ್ಲಿ ಭೇಟಿಯಾದರು. ಹೇಗೋ ಮಾಡಿ ಅವನನ್ನು[...] ಮನೆಗೆ ಕರೆತಂದರು. ಮುಖಸ್ತುತಿಗಳಿಗಾರಂಭಿಸಿದರು.—“ನನ್ನ ಮಗಳನ್ನು [...] ಯಾರಿಗೂ ಕೊಡಲೊಲ್ಲೆ. ನಿನ್ನ ಪಾದಸೇವೆಯೇ ಲಲಿತೆಗೆ ಯೋಗ್ಯವಾ[...] ನೀನವಳನ್ನು ಸ್ವೀಕರಿಸಬೇಕು. ಪೂರ್ವದಲ್ಲಿ ನಡೆದುದು ನಡೆದುಹೋಯಿತು” [...] ಹೇಳಿದರು.

× × × ×

ಶ್ರೀಮತಿ ಲಲಿತೆಗೂ ಶ್ರೀಯುತ ಕಮಲಾಕರನಿಗೂ ವಿಜ್ರಂಭಣೆಯಿಂದ ವಿ[...] ವಾಯಿತು. ತನ್ನ ಮಗಳಿಗೆ ಅನುರೂಪನಾದ, ಸಿರಿಯುತನಾದ ವರನು ದ[...] ದನೆಂದು ರಾಮುರಾಯರೂ ಅವರ ಪತ್ನಿಯೂ ಹಿರಿಹಿರಿ ಹಿಗ್ಗಿದರು—ಕುಗ್ಗಿದರು.

ದಂಪತಿಗಳು ಬೆಂಗಳೂರನ್ನು ಸೇರಿ ಇಂದಿಗೆ ಎರಡು ತಿಂಗಳುಗಳಾದುವು. [...] ರಾಯರು ಕುರ್ಚಿಯ ಮೇಲೆ ಕುಳಿತು ಗಲ್ಲಮೀಸೆಗೆ ಕೈಹಾಕಿ ಅದನ್ನು ತಿರು[...] ಏನೋ ಆಲೋಚಿಸುತ್ತಿದ್ದರು. ಅಷ್ಟರಲ್ಲಿ ಟಪ್ಪಾಲುಪೇದೆಯು ಒಂದು ಪತ್ರ[...] ತಂದು ಮೇಜಿನ ಮೇಲಿಟ್ಟ. ಅದನ್ನು ರಾಮುರಾಯರು ತಟ್ಟನೆ ಒಡೆದು ಓದಿದ[...]

ತೀರ್ಥರೂಪ ಮಾವಯ್ಯನವರಿಗೆ, ೬—೬—[...]

ನವಜಾಮಾತನಾದ ಕಮಲಾಕರನ ಪ್ರಣಾಮಗಳು. ತರುವಾಯ, ನಾನೂ[...] ತೆಯೂ ಸೌಖ್ಯದಿಂದಿದ್ದೇವೆ. ನಮ್ಮ ವಂಚನೆಗಾಗಿ ಕ್ಷಮಿಸಿರಿ.—ಅಂದರೆ, [...] ನಿಮಗೆ ಪ್ರಥಮದಲ್ಲಿ ತಿಳಿಯಲೆಳಸಿದಂತೆ “೩೫೦ ರೂಪ್ಯಾ ಸಂಬಳ ತಿನ್ನುವ ಸೆ[...] ಯಾಗಿಲ್ಲ.” ಬೆಂಗಳೂರಿನಲ್ಲಿ ಬರೇ ೨೨ ರೂಪ್ಯಾ ಮಾಸಿಕ ತಲಬನ್ನು ತಿನ್ನುವ ಬಡ[...] ನಿಮ್ಮಂತಹ ಧನಿಕರು ಬಡವರನ್ನು ಕಡೆಗಣ್ಣಿನಿಂದ ನೋಡುವುದನ್ನು ನಿಲ್ಲಿಸಬೇಕೆ[...] ಪ್ರಿಯ ಲಲಿತೆಯನ್ನು ನನ್ನವಳನ್ನಾಗಿ ಮಾಡಿಕೊಳ್ಳಬೇಕೆಂದೂ ನಾನು ಅಂದು [...] ಸುಳ್ಳು ಪತ್ರವನ್ನು ಬರೆದಿದ್ದೆನು. ಇದನ್ನು ಕೇಳಿ ಗಾಬರಿಗೊಳ್ಳಬೇಡಿ. ನಿಮ್ಮ ಮ[...] ಸುರಕ್ಷಿತಳಾಗಿಯೇ ಇರುವಳು. ಇದರೊಡನೆ ಅವಳೂ ಒಂದು ಪತ್ರವನ್ನಿಟ್ಟಿರು[...] ಓದಿರಿ.

ಇಂತಿ, **ಕಮಲಾಕರ.**

ತೀರ್ಥರೂಪ ತಂದೆಯವರ ಚರಣಾರವಿಂದಗಳಿಗೆ,

ಒಬ್ಬ ಧನಿಕನನ್ನೇ ನೀವು ನನಗೆ ಮದುವೆ ಮಾಡಬೇಕೆಂದಿದ್ದಿರಿ, ನಿಮ್ಮ ಆಶೆಯೇ[...] ಸ್ವಾಭಾವಿಕವಾದುದೇ. ಆದರೆ ನೀವು ಬಡವರ ಕಡೆಗೆ ತೋರುತ್ತಿದ್ದ ತಿರಸ್ಕಾರ[...] ವನ್ನು ನೋಡಿ ನೋಡಿ, ನನ್ನ ಹೃದಯವು ಕರಗಿತು. ಬಾಯ್ಬಿಡಲಾರದಾಗಿದ್ದೆ. [...] ಹಣದ ಗೌರವ, ಮತ್ತು ದುರಭಿಮಾನಗಳಿಗೆ ತಕ್ಕ ಪಾಠವನ್ನು ಕಲಿಸಬೇಕೆಂದು ನ[...] ನನ್ನ ಪತಿಯೊಡನೆ ವ್ಯವಹಾರಗಳನ್ನು ಮಾಡಿದ್ದೆ. ನಾವು ವಿಜಯಿಗಳಾದೆವು ಇನ್ನಾ[...] ದೀನರ ಮೇಲೆ ವಾತ್ಸಲ್ಯವನ್ನಿಡಿರಿ.

ಇಂತಿ, **ಎಂ. ಲಲಿತೆ.**

ವಾಚಕ! ಕಮಲಾಕರನ ಬೋಂಬನ್ನು ನೋಡಿ ಈಗ ರಾಮುರಾಯರಿಗೇನಾಗಬೇಕ[...]

(TIT-BITS.) (ಟಿಟ್-ಬಿಟ್ಸ್.)

ಮೈಸೂರ್ ನರ್ಸಣ್ಣನ ಶಂಖ!

...ಂ! ಭೂಂ!! ಭುಂ ಭುಂ ಭುಂ ಭುಂ! ...ಭೂಂ—ಬಹೋ ಬಹೋ—ೀ. ಹೋ— ...—ಹೋ—ೀ—ೀ—ೀ. ನಮ್ಸಕಾರ ರಾಯ್ರೇ ... ನರ್ಸಣ್ಣನ ನಮ್ಸಕಾರ ರಾಯರ್ರೇ. ಸಲ್ಲಾಂ ದೇವ್ರೆ ಸಲ್ಲಾಂ! ಬಲಗೈಯ್ಯ ... ಸಲಾಂ! ಎಡಗೈಯಲ್ಲೊಂದು ಸಲಾಂ! ರೈಟ್ ಸಲಾಂ! ಲೆಫ್ಟ್ ಸಲಾಂ! ... ಸಲಾಂ! ಕೋರೆ ಸಲಾಂ! ಅಡ್ಡ ಸಲಾಂ! ಗಿಡ್ಡ ಸಲಾಂ! ಬೇಕು ಸಲಾಂ? ... ಸಲಾಂ!!! ಭೂಂ—ಭೂಂ—ಭೂಂoooo. ಟಕ ಟಕ—ಟಕ ಟಕ.

× × × ×

ಬಡವ್ರ ಬಂಧೂಗೆ ಚಂದಾದಾರರಾದವರೆಲ್ರಿಗೂ ಸಲಾಂ. ಕಾಸು ಕೊಟ್ಟವ್ರಿಗೂ ... ಕೊಡ್ದವ್ರಿಗೂ ಸಲಾಂ. ಕಂಕನಾಡಿಯ ಕೊಂಕ್ಣಿ ದಿರ್ವೆಂಗೆ ಸಲಾಂ. ... ಸರ್ಕರಿಗೆ ಎಡಗೈ ಸಲಾಂ. ಬಡವರ ಬಂಧುವನ್ನು ಹೊಗಳುವವ್ರಿಗೂ ...—ತೆಗಳುವವ್ರಿಗೂ ಸಲ್ಲಾಂ.

× × × ×

ಸಲಾಂ ಕೊಟ್ಟು ನನ್ ಕೈ ಬಚ್ಚಿ ಹೋಯ್ತು ರಾಜಾ! ಒಂದು ಪದಾ ಹೇಳ್ತೀನೆ ... ಕಿವಿ ಅಗ್ಲ ಮಾಡ್ರಿ. ನರ್ಸಣ್ಣನ ತಮಟೆ! ಎದ್ದು ಬಿಡು. ಟಕ ಟಕ— ...ಟಕ ಟಿಕ್ ಟಕ್. ಟಕ ಟಕ ಟಕ ಟಕ ಟಕ ಟಕ. ಟಕ್—ಟಕ್—ಟಕ್— ...ಟಕ್! "ದಾರೀ ಮೇಲೆ ಹುಡ್ಗಿ ಕಂಡೆ। ಕೋಲು ಕೋಲಣ್ಣ। ಅವಳಾ ಕೂಡೆ ...ನಾಡಿದೆ ಭಾರಿ ಲಯಕ್ಕಣ್ಣ। ಮಾರಿ ಮುಂಡೆ ಕೆಪ್ಪೆಗೆ ಕೊಟ್ಟಳು ಒಂದು ...। ಕೊಂಕ್ಣಿ ದಿರ್ವೆಗೆ ಬರೆದುಕೊಂಡೆ। ಹಾಲ್‌ಹವಲಣ್ಣ। ಕಿರ್ತನ್ ಜಾತಿ ... ದಿರ್ವೆಂ ಧರ್ಮದ ಬೀಡಣ್ಣ। ನೀತಿ ಧರ್ಮ ಅದರಲ್ಲುಂಟು ಓದಿ ನೋಡಣ್ಣ। ...ಓಡಣ್ಣ। ಕೇಳು ಐತಣ್ಣ। ನಾನು ಮೈಸೂರ್ ನರ್ಸಣ್ಣ। ಇದು ಇಲ್ಲಿಗೆ ...ಣ್ಣ!" ಸಾಕ್ ನನ್ ಪದಾ!

× × × ×

"ಮಂಗ್ಳೂರಲ್ಲೂ, ಏಕೆ ಇಡೀ ದಕ್ಷಿಣ ಕನ್ನಡದಲ್ಲೂ ಕನ್ನಡಕ್ಕೆ ಪ್ರೋತ್ಸಾಹ ..." ಎಂತ ಒಬ್ಬ ಒಳ್ಳೇ ಕನ್ನಡಾಭಿಮಾನಿಗಳು ನನ್ಕೂಡೆ ಹೇಳಿದ್ರು ನೋಡಿ! ಇವರು ... ನನ್ನೊಡನೆ ಹೇಳೋಗ ಇವ್ರ ತಲೆಗಿಲೆ ತಿರುಗಿ ಇಟ್ಟಿರಬೇಕು! ಇವ್ರಿಗೆ ನನ್ನ ...ದು ಸವಾಲ್ ಆತೆ. "ಅಯ್ಯಾ ಕನ್ನಡ ಬಂಧುವೇ, ಮಂಗ್ಳೂರ್ ಮೇಲೂ ... ಕನ್ನಡದಲ್ಲೂ ಎಷ್ಟು ಪತ್ರಿಕೆಗಳಿವೆ ಎಂದು ನಿಂಗೆ ತಿಳಿದಿದೆಯಾ?"

× × × ×

ಇಲ್ಲಿ ಸ್ವದೇಶಾಭಿಮಾನಿ, ಕಂಠೀರವ, ನವಯುಗ, ರಾಷ್ಟ್ರಬಂಧು, ದೇಶರಂಜನ, ... ಕೃಷ್ಣ ಸಂದೇಶ ಮೊದ್ಲಾದ ಉಜ್ವಲ ಕನ್ನಡ ವಾರ ಮತ್ತು ಮಾಸಿಕ ಪತ್ರಿಕೆಗಳಿವೆ ...! ಇಷ್ಟು ಕಾಲದಿಂದ್ಲೂ ಇವು ಒಳ್ಳೇ ರೀತಿಯಿಂದ ನಡೆದು ಕೀರ್ತಿ ಪಡ್ದಿವೆ ...? ಇಷ್ಟು ಸಣ್ಣ ಜಿಲ್ಲೆಯಲ್ಲಿ ಇಷ್ಟು ಪತ್ರಿಕೆ ಇರುವುದೆಲ್ಲಿ? ತೋರಿಸು! ... ತಲೆ ಖರ್ಚು ಮಾಡ್‌ಬೇಡಾ ತಿಳಿಯಿತೇ?—ನೀನ್ ಪರಾವೂರಿನವ ಎಂತ ಬಿಟ್ಟೆ. ... ತಲೆಯನ್ನು ಬಗಲೊಳಗೆ ಇಟ್ಟು ಮಾತ್ನಾಡಬೇಡಾ ತಿಳೀತೇ? ಇದ್ರ ವಿಷಯ ... ನಿಲ್ತೀನೆ ಇಲ್ಲಿ ಬಾ—ನನ್ನೆದುರು ನಿಲ್ಲು. ಹೇಗೆ ಪಲಾಯನ ಮಾಡ್ತೀನೆ ...! ಭೂಂ—ಭೂಂ—ಟಕ ಟಕ ಟಕ—ಟಕ್—ಟಕ್!

× × × ×

"...ರವ"ದಲ್ಲಿ ಮಿಸ್ಟರ್ ಜೋರ್ಜ್ ಹರ್ಬೋರ್ಟರು ಮುನ್ಸಿಪಾಲ್ಟಿ ಚೇರ್ ...ನ್ನು ಎಚ್ರಿಸುತ್ತಾ "It would be a boon if the Chairman, ...ipal Council issues notices prohibiting the use ...aidan for those that wish to practice cycling every ... after 4 p. m., as these youngsters endanger the ... aged pensioners, and young children that ... the place for recreation" ಎಂದಿದ್ದಾರೆ. ಅಂದ್ರೆ "ಕೆಲವು ಮುದೀ ಪಿಂಚಿನ್ ತಿಂಬೋರೂ, ಮಕ್ಕಳೂ ಇದ್ದಾರೆ. ಅವರು ನಮ್ಮ ದೊಡ್ಡ ಮೈದಾನ್ ಮೇಗೆ ಹವಾ ತಿಂದುಬಿಡಲು ಸಂಜೆ ಬರ್ತಾರೆ—ಮೈದಾನ್ ಮೇಲೆ ಸೈಕೋಲ್ ಕಲಿಯೋರು ಅವರ ಮೇಲೆ ಸೈಕೋಲ್ ಹಾಕ್ತಾರೆ. ಅದ್ದಾಗಿ ಚೇರ್‌ಮೇನ್ರು ಒಂದು ನೋಟೀಸ್ ಜ್ಯಾರಿ ಮಾಡಿ ನಾಲ್ಕು ಘಂಟೆಯ ನಂತ್ರ ಯಾರೂ ಮೈದಾನ್ ಮೇಲೆ ಸೈಕಲ್ ಕಲಿಯಬಾರ್ದು ಎಂದು ಅಪ್ಪಣೆ ಕೊಡ ಬೇಕು" ಅಂತ! ಏನ್ರಿ! ರಾಜ್ಕೀಯ ಚಳ್‌ವಳಿಗೆ ಸೇರ್ಬಾರದೆಂದು ಸರ್ಕಾರ್ ೧೪೪ನೇ ಸೆಕ್ಷನ್ ಮೈದಾನ್ ಮೇಲೆ ಇದೆ. ಇನ್ನು ಸೈಕಲ್ ಕಲಿಯೋ ಚಳವಳಿಗೂ ಸೇರ್ ಬಾರದೆಂದು ೧೪೪ರ ಮೇಲೆ ಇನ್ನೊಂದು ೨೮೮ನ್ನು ಚೆಯರ್‌ಮೇನರಿಂದ ಬೇಡೋದೆ? ಹೀಗಾದ್ರೆ ನನ್ನ ಮಕ್ಳೆಲ್ಲ ಎಲ್ಲಿ ಹೋಗ್ಬೇಕು?

× × × ×

ನಂಗೆ ೨೬॥ ಮಂದಿ ಸಣ್ಣ ಸಣ್ಣ ನೊಲೆತಿನ್ನುವ ಮಕ್ಳು ಇದ್ದಾರೆ. ಅವರೆ ಲ್ರನ್ನೂ ಮೈಸೂರಿಂದ ಕರ್‌ತಂದು ಇಲ್ಲಿ ಸೈಕಲ್ ಕಲ್ಸಬೇಕೂ ಅಂತ ಮನಸ್ಸಿದೆ. ಚೇರ್‌ಮೇನರು ಮಿ॥ ಹರ್ಬೋರ್ಟರ ಮಾತಿನ್ ಬಲೆಗೆ ಸಿಕ್ಕೊಂಡು (ಒಂದು ಪೇಳಿ) ಬಸ್ರೂರ್ ಪಂಚಾತಿಕೆಯ ಖಾಸಾ ತಮ್ಮನಾದ ಮೈದಾನ್ ಕಾನೂನನ್ನು ಜ್ಯಾರಿ ಮಾಡಿದ್ರೆ, ಅದನ್ನು ಮುರ್ದು ಬಿಡುವ ನನ್ನ ೨೬॥ ನೊಲೆ ತಿನ್ನುವ ಮಕ್ಳೂ ಜೇಲಿಗೇ ಹೋಗೋದೆ ಸರಿ—ಮೈಸೂರಲ್ಲಿ ಹೀಂಗಿಲ್ಲ ರಾಜಾ!

× × × ×

ಮಿ॥ ಹರ್ಬೋರ್ಟರೇ, ಸೂರ್ಯನು ಹೆಂಡ್ತಿ ಮನ್ಗೆ ಹೋಗೋದು ಸಂಜೆ ನಾಲ್ಕು ಘಂಟೆ ಆದ ಮೇಲೆ ಅಲ್ವಾ? ಸೈಕಲ್ ಕಲಿಯೋಕೆ ಸಂಜೆ ಸಮಯ ಉತ್ತಮ ಅಲ್ವೇ? ಜನರು ಬೆಳಿಗ್ಗೆ ಅಥವಾ ಮಧ್ಯಾಹ್ನ ಸೈಕಲ್ ಕಲೀತಾರೆ? ನಿಮ್ಮ ಮುದಿ ಪಿಂಚಿನ್ ವಾಲರು ಮೈದಾನಿಗೆ ಬರೋದು ಬೇಡಾ ಅಂತ ಹೇಳ್ಬಿಡಿ. ಇನ್ನು ಕಿರ್ಕೆಟ್ ಸುರಾಗ್ತ. ರಾಜೇಶ್ರೀಗಳಾದ ನಾರ್ಣಪ್ಪ ಸುವೊರ್ಣೋರು, ಲಚ್‌ಮನ್ ಪೈಗಲು, ಪೌಲ್ ಲೂಯಿ ಸರು, ಕಿಷ್‌ನಪ್ಪನವರು ಮೊದಲಾದ ಸಿಕ್ಸರ್ ಪ್ಲೇಯರರು ಚೆಂಡಾಟವಾಡುವಾಗ, ಚೆಂಡೆಲ್ಲಿಯಾದರೂ ಆ ಒಲ್ಡ್ ಪಿಂಚಿನ್‌ದಾರ್ರ ಬೋಳು ಮಂಡೆಗೆ ಬಿದ್ದು ರಾಮರಕ್ತ ವಾದೀತು. ಅವ್ರಿಗೆ ಈಗ್ಲೆ ಬುದ್ಧಿ ಹೇಳ್ಬಿಡಿ. ಅವ್ರ ಕೈಕಾಲ್ ಮೇಲೆ ಸೈಕಲ್ ಮಾತ್ರ ಬೀಳೋದೋ? ಕಿರಿಕಿಟ್ ಚೆಂಡು ಬೀಳೋದಿಲ್ವೇ? ಚೆಂಡಾಡಬಾರ್ದೆಂದು ಒಂದು ಮೈದಾನ್ ಕಾನೂನನ್ನು ತರುವಂತೆಯೂ ಹೇಳ್ಬಿಡಿ. ನೋಡ್ವ—ಭೂಂ—ಭೂಂ. ಟಕ ಟಕ—ಟಕ—ಟಕ್ ಟಕ್ ಟಕ.

× × × ×

ನಮ್ಮ ಮೈಸೂರು ಮಾರಾಜ್ರು ಮೊನ್ನೆ ಸೊದೇಶಿ ಪ್ರದರ್ಶನ ಒಂದರ ಸಹಾ ಯಾರ್ಥವಾಗಿ ೨೦೦ ರೂಪಾಯಿ ದಾನ ಮಾಡಿದ್ದಾರೆ ರಾಜಾ. ನೋಡಿ ನಿಮ್ಮೂರಿನ ಬೈ ಇಂಡಿಯನ್ ಸೊದೇಶಿ ಸಂಘಕ್ಕೂ ನೀವ್ ಸೊಲ್ಪ ಸೊಲ್ಪ ಸಹಾಯಮಾಡ್ಬಾರದೇ?

× × × ×

ನಿಮ್ಮೂರ ಬಾವಟೆಕಟ್ಟೆಯಲ್ಲಿ ಒಂದು ಲೈಬ್ರೆರಿ ತೆರೆಯಲ್ಪ ಡೋಣಾಗುತ್ತೆ ಎಂಬ ವಾರ್ತೆ ಇತ್ತಲ್ಲ. ಅದೇನು ಓಪನ್ ಆಗೋದಿಲ್ಲ? ಅದ್ರೊಳಗೆ ಹೊಸ ಹೊಸ ಟೇಬಲ್‌ಗಳಿವೆ. ಆ ಟೇಬಲ್ ಮೇಲೆ ಪುಸ್ತಕಗಳ ಬದಲಾಗಿ ತುಂಬಾ ಧೂಳು ಕುಳ್ತಿದೆ ಯಲ್ಲಾ? ಇದಕ್ಕಾರು ಗತಿ?—ಟಕ ಟಕ ಟಕ ಟಕ.

× × × ×

ಹಂಪನಕಟ್ಟೆಯ ತಾಲೋಕು ಆಫೀಸ್ ಎದುರು ಕೊರ್ನೇಶನ್ ಗಾರ್ಡನ್ ಇದೆ ಯಲ್ಲ? ಅದನ್ನೇಕೆ ಇಷ್ಟು ಹಾಳು ಹರಕು ಸ್ಥಿತಿಯಲ್ಲಿಟ್ಟಿರುವ್ರಿ? ಬ್ರಿಟಿಷ ರಾಜ್ಯವು ಶೇಕ್ ಆಗುತ್ತದೆ; ಮಂಗ್ಳೂರ್ ನಿದ್ದೆಯಲ್ಲಿದೆ ಎಂಬುದಕ್ಕೆ ಅದು ನಿದರ್ಶನವೇ? ಒಂದು ನಾಲ್ಕಾರು ರ... ಖರ್ಚ ಮಾಡಿ ಅದ... ಬಾರ್ದೇ? ಬಿದ್ದು ಎದ್ದ ಅಪರ ಗೋಡೆಯನು ... ಹೋಗ್ತೇನೆ.

ಕ್ಷಮಾಪಣೆ. *ಕರ್ನಾಟಕದಲ್ಲಿ ಸುಪ್ರಸಿದ್ಧರಾದ ಮೇಲಿನ ಲೇಖನದ ಅನಾಮಧೇಯ ಲೇಖಕ ಮಹನೀಯ... ಲೇಖನವನ್ನು ಪ್ರತಿಸಲವೂ ಬರೆದು ಕೊಡುತ್ತೇನೆಂದು ಭರವಸೆಯನ್ನಿತ್ತುದಕ್ಕಾಗಿ ಸನ್ಮಾನ್ಯ...

ವರ್ತಮಾನ ತರಂಗ.

ವಿದೇಶ.

ದಕ್ಷಿಣ ರೊಡೇಸಿಯಾ ಎಂಬಲ್ಲಿ ನಿಗ್ರೋ ಜಾತಿಯವರಿಗೆ ಕ್ರೈಸ್ತಧರ್ಮವನ್ನು ಬೋಧಿಸಿ ಅವರ ತಲೆ ಹಾಳು ಮಾಡಲಿದ್ದ ನಾಲ್ಕು ಮಂದಿ ಅಮೇರಿಕನ್ ಪಾದ್ರಿಗಳನ್ನು ಅಲ್ಲಿಯವರು ಗಡಿಪಾರು ಮಾಡಿದರು. ಕರ್ಮದ ಫಲ ಕಾಣುವುದೆಂದರೆ ಹೀಗೆಯೇ!

ಲಂಡನಿನಿಂದ ಹಿಂದೂದೇಶದ ವರೆಗೆ ಒಂದು ಮಾರ್ಗವನ್ನು ರಚಿಸಿ, ಅದರಲ್ಲಿ ಮೋಟರ್ ಗಾಡಿಗಳು ಓಡುವಂತೆ ಅನುಕೂಲಿಸಬೇಕೆಂದು ಆಲೋಚನೆಯಾಗಿದೆ. ಅರಸರನ್ನು ನೋಡಲು ಹೋಗಬಹುದಲ್ಲ!

ಪೋರ್ ಬಂದರಿನ ಮಹಾರಾಜರ ಮುಂದಾಳುತನದಿಂದ ಅಖಿಳ ಭಾರತ ಕ್ರಿಕೆಟ್ ಸಂಗಡವೊಂದು ಇಂಗ್ಲಾಂಡಿಗೆ ಹೋಗಿದೆ. ಹಿಂದೂದೇಶದ ಆಟಗಾರರು ಆಂಗ್ಲೇಯರನ್ನು ಸೋಲಿಸುತ್ತಿರುವರು. ವಜೀರ ಅಲಿ ಎಂಬವರ ತಲೆಗೆ ಪೆಟ್ಟು ಬಿದ್ದು ಆಸ್ಪತ್ರೆಗೆ ಹೋದರೂ, ಗುಣವಾಗಿ, ಆಡುತ್ತಿರುವರು. ಸಿ. ಕೆ. ನ್ಯಾಡು ಎಂಬವರು ಇಂಡಿಯನ್ "ಬ್ರೇಡ್‌ಮೆನ್" ಎಂಬ ಹೆಸರು ಗಳಿಸಿದ್ದಾರೆ.

ಲಂಡನಿನ ಒಬ್ಬನು ಒಂದು ವಿಚಿತ್ರ ಸಂಗತಿಯನ್ನು ಕಂಡುಹಿಡಿದಿದ್ದಾನೆ. ಅಕ್ಷರಗಳನ್ನು ಪೋರ್ಜರಿ ಮಾಡಿದರೆ ಅಳಸಿದ ಅಥವಾ ಮಾಸಿದ ಗುರುತನ್ನು ಸರಿಯಾಗಿ ಕಂಡುಹಿಡಿಯುವ ಅಲ್ಟ್ರಾ ವ್ಯಾಲೆಟ್ ರೇಸ್ ಎಂಬ ವಿದ್ಯುತ್‌ಶಕ್ತಿಯನ್ನುಪಯೋಗಿಸಿದರೆ ಸೈ. ಪೋರ್ಜರಿಯಾದುದು ಕಂಡುಬರುತ್ತದೆ. ಪೋರ್ಜರಿಗಾರರು ಜಾಗ್ರತೆಯಿರಲಿ!

ರಷ್ಯನರಿಗೂ ಜಾಪಾನರಿಗೂ ಬೇಗನೆ ಯುದ್ಧವಾಗುವಂತಿದೆ.

ಘಂಟೆಗೆ ೧೪೦ ಮೈಲುಗಳಂತೆ ಹಾರುವ ಒಂದು ವಿಮಾನವನ್ನು ತಯಾರಿಸುತ್ತಿರುವರು. ಬ್ರಿಟಿಷರ ಸಾಹಸ.

ರೋಮ್ ನಗರದ ಕ್ರೈಸ್ತ ಪೋಪರು ಒಂದು ಭವಿಷತ್ತನ್ನು ಹೇಳುತ್ತಾ ಭೂಲೋಕದಲ್ಲಿ ಇನ್ನೊಂದು ಪ್ರಳಯವು ಆಗಲಿರುವುದೆಂದಿರುವರು. ಜಲಪ್ರಳಯವಾಗದಿದ್ದರೆ ಸರಿ!

ಒಳದೇಶ.

—ಅಜಮೀರದಲ್ಲಿ ಕಮಿಶನರರಾದ ಗಿಬ್ಸನ್ ಎಂಬವರಿಗೆ ರಿವಾಲ್ವರ್ ಹಾರಿಸಿ ಹೊಡೆದ ರಾಮಚಂದ್ರ ಚಾಪಟ್ ಎಂಬವನಿಗೆ ೧೦ ವರ್ಷಗಳ ಕಠಿಣ ಶಿಕ್ಷೆಯು ವಿಧಿಸಲಾಯಿತು.

—ಮುಸಲೀ ಪಟಾಮಿನಲ್ಲಿ ಒಬ್ಬಳು ಮದುಮಗಳು ತನ್ನ ಮದುವೆಯ ಮುಂಚಿನ ದಿನ ಬೆಂಕಿಯಲ್ಲಿ ಹಾರಿ ಪ್ರಾಣಬಿಟ್ಟಳು. ಪರಮಪವಿತ್ರಳಾಗಿರಬೇಕೆಂದು ಅವಳು ಹೀಗೆ ಮಾಡಿದಳಂತೆ. ಅವಳ ಒಂದು ಸ್ಮಾರಕವನ್ನು ಸ್ಥಾಪಿಸುವುದಕ್ಕಾಗಿ ಅಲ್ಲಿಯ ಜನರು ಹಣ ಕೂಡಿಸುತ್ತಿರುವರು.

—ಕಲ್ಕತ್ತೆಯಲ್ಲಿ ಉಪೇಂದ್ರನಾಥನೆಂಬವನು ಒಂಸು ಹೊಸ ಪಿಸ್ತೂಲನ್ನು ತಯಾರಿಸುತ್ತಿದ್ದನು. ಅವನನ್ನು ಸೆರೆಹಿಡಿದರು ಶಿಕ್ಷೆಕೊಟ್ಟರು, ಪಿಸ್ತೂಲೆಂದರೆ ಆಟವೋ?

—ಲಾಹೋರಿನ ದಿವಾನ್ ಲಕ್ಷ್ಮಣ ಪ್ರಸಾದ್ ಎಂಬ ಜಡ್ಜರವರ ಮನೆಗೆ ಕಳ್ಳರು ನುಗ್ಗಿ ಆಭರಣಗಳನ್ನೂ, ಒಂದು ಪಿಸ್ತೂಲನ್ನೂ ಎತ್ತಿಕೊಂಡು ಹೋದರು.

—ಕಳೆದ ತಿಂಗಳ ಆದಿಯಲ್ಲಿ ಕಲ್ಲಿಕೋಟೆ ಮೊದಲಾದ ಕಡೆಗಳಲ್ಲಿ ಭಾರೀ ತುಫಾನು. ಅನೇಕ ಮನೆ ಮಠಗಳು ಕುಸಿದು ಬಿದ್ದುವು. ಕೆಲವು ಮನೆಮಾಡುಗಳು ಟೊಪ್ಪಿಗಳಂತೆ ಹಾರ್ಯಾಡಿದುವು.

—ಬಿಹಾರಿನಲ್ಲಿ ಜೋರ್ಜ್ ರಾ[...] ಜನ್ಮದಿನಾರ್ಥವಾಗಿ ತಾ. ಅನೇ ದಿನ [...] ತುಪಾಕಿಗಳು ಹಾರಿಸಲಾದುವು. ಒಂ[...] ತುಪಾಕಿಯು ತನ್ನನ್ನು ಹಾರಿಸಿದವನ[...] ಹಾರಿಸಿಬಿಟ್ಟಿತು. ಆಸ್ಪತ್ರೆಯಲ್ಲಿದ್ದಾನೆ[...]

—ಮೈಸೂರಿನ ಶ್ರೀಮನ್ಮಹಾರಾಜರು ಉದಕಮಂಡಲಕ್ಕೆ ಹೋಗಿ, ಅಲ್ಲಿ ವಿಹರಿ[...] ಮೈಸೂರಿಗೆ ಹಿಂತೆರಳಿದರು.

—ಚಿಟ್ಟಗೊಂಗಿನಲ್ಲಿ ಟಪ್ಪಾಲ್ ಪೇದೆಯು ಒಂದು ಪಾರ್ಸೆಲನ್ನು ಎತ್ತಿದನ[...] 'ಢಂ' ಎಂದಿತು! ನೋಡುವಾಗ ಅದರೊಳಗಿದ್ದ ಒಂದು ಬೋಂಬು ಒಡೆದುದೆಂದು ತಿಳಿದ[...] ಬಂತು. ಪೇದೆಯು ಸುಖದಲ್ಲಿದ್ದಾನೆ.

—ಮುಸಲೀಪಟಾಮಿನಲ್ಲಿ ಒಂದು ಬಾವಿಯೊಳಗಿನ ನೀರಿನಲ್ಲಿ ಗುಳ್ಳೆಗ[...] ಮೇಲೇಳುತ್ತಾ ಇದ್ದುವು. ಎಲ್ಲರಿಗೂ ಆಶ್ಚರ್ಯವಾಯಿತು. ಕೊನೆಗೆ ಒಬ್ಬನನ[...] ಇಳಿಸಿ ಮುಳುಗಿಸಿದರು. ಅವನು ಮೇಲೆ ಬರುವಾಗ ಒಂದು ಹಿತ್ತಾಳಿಯ ದೊಡ[...] ಪ್ರತಿಮೆಯನ್ನು ಮೇಲೆ ತಂದನು. ಇಸ್ಲಾಂ ಮತದ ಒಬ್ಬ ಸಾಧುಗಳ ಪ್ರತಿಮೆಯಂತ[...]

—ಕಡೂರಿನಲ್ಲಿ ಗುರುಸ್ವಾಮಿ ಎಂಬೊಬ್ಬನು ತನ್ನ ಎಳೇ ಪ್ರಾಯದ ಹೆಂಡತಿಯ[...] ಸೌಶೀಲ್ಯದ ಕುರಿತು ಸಂಶಯಗ್ರಸ್ತನಾಗಿ, ವ್ಯಸನದಿಂದ ತನ್ನ ಎಳೇ ಮಗುವನ[...] ಕೊಂದು, ತಾನು ಪ್ರಾಣಹತ್ಯಮಾಡಿಕೊಳ್ಳುವುದರಲ್ಲಿದ್ದನು. ಅವನನ್ನು ನೆರೆಹೊ[...]ಯವರು ಆಸ್ಪತ್ರೆಗೊಯ್ದರು. ತಲೆ ತಿರುಗಿಕೊಂಡಿರಬಹುದು!

—ಕಾಶಿಯಲ್ಲಿ ಟಪ್ಪಾಲು ಪೆಟ್ಟಿಗೆಗಳೆ ಕಾಣೆಯಾಗುತ್ತಿರುವುವು. ಒಂದ[...] ಟಪ್ಪಾಲು ಪೆಟ್ಟಿಗೆಯಲ್ಲಿ "ಪೋಸ್ಟಲ್ ಇಲಾಖೆಯವರೇ ಜಾಗ್ರತೆ" ಎಂಬ ಎಚ್ಚರಿಕೆಯ[...] ಕಾಗದವು ಸಿಕ್ಕಿತಂತೆ.

—ಕಲ್ಕತ್ತೆಯಲ್ಲಿ ಕಕ್ಷಿಗಾರನ ೧೮ ಸಾವಿರ ರೂಪಾಯಿಗಳನ್ನು ದುರ್ವಿನಿಯೋ[...] ಮಾಡಿದ ಎಸ್. ಆರ್. ಬೆನರ್ಜಿ ಎಂಬ ವಕೀಲರಿಗೆ ೧೮ ತಿಂಗಳ ಸಜೆ ಸಿಕ್ಕಿತು. ಕೆಲ[...] ವಕೀಲರಿಗೆ ಇದು ಪಾಠ!

—ಡೆಕ್ಕಾದಲ್ಲಿ ಪೇಶಾವರದ ಒಬ್ಬ ಹಣ್ಣು ವ್ಯಾಪಾರಿಗೆ ಒಂದು ಪಾರ್ಸೆಲ[...] ಟಪ್ಪಾಲದ್ವಾರ ಬಂದಿತು. ಅವನ ಕೈಯಲ್ಲಿ ಹಣವಿಲ್ಲದಿದ್ದುದರಿಂದ ಅವನದನ್ನು ತೆಗೆದ[...] ಕೊಳ್ಳಲಿಲ್ಲ. ಪೋಲೀಸರು ಅದನ್ನು ಬಿಚ್ಚಿದರು. ಒಂದು ಸುಂದರವಾದ ರಿವಾಲ್ವರ[...] ಅದರಲ್ಲಿದ್ದಿತು. ಹಣ್ಣು ಮಾರುವವನನ್ನು ಸ್ಟೇಶನಿಗೊಯ್ದಿರುವರು. ಹಣ್ಣಿನ ಬುಟ್ಟಿ[...]ಯನ್ನೂ ಎರೆಸ್ಟ್ ಮಾಡಲಿಲ್ಲ.(?)

—ಮುಂಬಾಯಿಯ ಹಿಂದೂಮುಸ್ಲಿಮ್ ಗಲಾಟೆಗೆ ಹಿಂದೂಗಳು ಕಾರ[...]ರೆಂದೂ, ಅವರ ಮುಖಂಡರ ಮೇಲೆ ತಾನು ಖಟ್ಲೆ ನಡೆಸುವೆನೆಂದೂ ಶೌಕತಾಲಿಯವ[...] ಹೇಳಿರುವರು.

—ಮುಂಬಾಯಿಯ ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರಾದ ಹೆಸರುವಾಸಿ [...]ದಸ್ತೂರರೆಂಬವರಿಗೆ ನೈಟ್‌ಹುಡ್ ಬಿರುದು ದೊರತಿದೆ.—ಸಂತೋಷ!

—ಧಾರಾಪುರದಲ್ಲಿ ಒಂದು ಮುಸ್ಲಿಮ ಕುಟುಂಬವು ಭೋಜನಮಾಡಿ ಒಟ್ಟ[...] ಎದ್ದಿತು. ಊಟಮಾಡಿದವರಿಗೆ ಎಲ್ಲರೂ ಹುಚ್ಚು ಹಿಡಿಯಿತು. ಒಬ್ಬನು ಇನ್ನೊ[...]ನನ್ನು ಹೊಡೆದನು, ಬೈದನು. ಅವರು ತಿಂದ ಆಹಾರವನ್ನು ಪರೀಕ್ಷಿಸಲಾಗಿ ಅದರ[...] ಏನೋ ಒಂದು ವಿಷವಿದ್ದುದು ಕಂಡು ಬಂತು.

—ಕಲ್ಕತ್ತದಲ್ಲಿ ಸುಶೀಲ ಕುಮಾರ ಬೆನರ್ಜಿ ಎಂಬ ನಿರುದ್ಯೋಗಿ ತರುಣ[...] ತನ್ನ ಕೆಲವು ಕುಟುಂಬಿಕರೊಡನೆ ಊರೂರು ಹೋಗಿ, ತಾನು ಅಲ್ಲಿಯ ಯುನಿವ[...]ಟಿಯ ಪದವೀಧರನೆಂದು ಕೊಚ್ಚಿ ಅನೇಕ ವಿವಾಹಗಳನ್ನಾಗಿ, ವರದಕ್ಷಿಣೆಯಾಗಿ ಬ[...] ಹಣವನ್ನೂ ತನ್ನ ಹುಡುಗಿಗಳ ಭಂಗಾರಗಳನ್ನೂ ಲುಟಾಯಿಸಿದುದಕ್ಕಾಗಿ ಶಿಕ್ಷಿಸಲ್ಪಟ್ಟ[...]ವನು.

—ಮುಂಬಾಯಿಯ ಕೆಲವು ಉತ್ಸಾಹೀ ಸದ್ಗೃಹಸ್ಥರು ಬ್ರಹ್ಮಶ್ರೀ ನಾರಾಯಣ ಸ್ವಾಮಿ ಸ್ಮಾರಕ ಫಂಡು ಎಂಬುದನ್ನು ಸ್ಥಾಪಿಸಿದ್ದು, ಇಷ್ಟರಲ್ಲೇ ಸುಮಾರು ೧೭೪೩ ರಷ್ಟು ರೂಪಾಯಿಗಳನ್ನು ಸಂಚಯಿಸಿರುವರು. ಈ ಹಣದಿಂದ ಇಲ್ಲಿಯ ಶ್ರೀ. ಗೋಕರ್ಣನಾಥ ಕ್ಷೇತ್ರದಲ್ಲಿ ಒಂದು ಸ್ಮಾರಕವನ್ನು ಸ್ಥಾಪಿಸಲಾಗುವುದು. ಇದರ ಪ್ರಶಂಸನೀಯ ಕೆಲಸಕ್ಕೆ ಎಲ್ಲರೂ ಸಹಾಯ ಮಾಡಬೇಕಾಗಿದೆ.

—ತಮ್ಮ ತಾಯಿಯು ಪಾತಿವ್ರತ್ಯವನ್ನು ಹಾಳುಮಾಡಿಕೊಂಡುದಕ್ಕಾಗಿ ಲಾಹೋರಿನಲ್ಲಿ ಮೂವರು ಸಿಖ್ಖ ತರುಣರು ತಾಯಿಯನ್ನು ಕೊಂದರು. ಅವರಲ್ಲಿಬ್ಬರಿಗೆ ಗಲ್ಲಶಿಕ್ಷೆಯಾಯಿತು.

—ಬೆನಾರೆಸ್ಸಿನಲ್ಲಿ ಕಾಶೀನಾಥ ಸಿಂಗ್ ಎಂಬ ಬಡ ಬ್ರಾಹ್ಮಣನು ತಾನು ತೋಡದ ಮಹಾರಾಜನ ಮಗನೆಂದು ಹೇಳಿಕೊಂಡು ಮುಂಡ ಮೊದಲಾದ ಸಂಸ್ಥಾನಗಳ ಮಹಾರಾಜರಲ್ಲಿಗೆ ಹೋಗಿ ಕೆಲವು ತಿಂಗಳುಗಳ ತನಕ ಅವರ ಊಟಉಪಚಾರಗಳಲ್ಲಿದ್ದು ಸುಖವನ್ನನುಭವಿಸಿದನು. ಕೊನೆಗೆ ಅವನು ನಿರುದ್ಯೋಗಿಯಾದ ಬಡ ಬ್ರಾಹ್ಮಣ ತರುಣನೆಂದು ತಿಳಿದುಬಂತು. ಅವನನ್ನು ಕೈದುಮಾಡಲಾಗಿದೆ.

—ಬರ್ಡಾನಿನಲ್ಲಿ ರಾಜೇಶ್ವರಿ ದೇವಿ ಎಂಬ ವಿಧವೆಯು ಲೀಲಾವತಿ ಎಂಬವಳ ಗಂಡನ ಮೇಲಿನ ಪ್ರೇಮದಿಂದ ಲೀಲಾವತಿಯನ್ನು ಕೊಂದಳು. ಅವಳಿಗೆ ದೇಹಾಂತ ಶಿಕ್ಷೆಯಾಗಿದೆ.

—ಅನಂತಪುರದ ಅರೆಸಮುದ್ರಂ ಎಂಬಲ್ಲಿ, ಕಡಿದು ಹಾಕಲ್ಪಟ್ಟ ಒಂದು ಮರವು ತನ್ನಷ್ಟಕ್ಕೆ ಎದ್ದು ನಿಂತಿದೆ. ವೈಚಿತ್ರವನ್ನು ನೋಡಲು ಸಾವಿರಾರು ಜನರು ಪರದೇಶಗಳಿಂದಲೂ ಹೋಗುತ್ತಿರುವರು. ಸತ್ತ ಮರದಲ್ಲಿದ್ದ ಒಂದು ಸರ್ಪದ ಶಕ್ತಿಯಿದೆಂದು ತಿಳಿದುಬಂದಿದೆ.

—ಲಾಹೋರಿನಲ್ಲಿ ಒಂದು ಸ್ಟೋರ್‌ರೂಮನ್ನು ಒಬ್ಬ ಪೋಲೀಸನು ಕಾವಲು ನೋಡುತ್ತಿದ್ದನು. ಅಧಿಕಾರಿಗಳು ಸ್ಟೋರಿನ ತನಿಖೆಗೆ ಬರುವ ದಿನ ಆ ಪೋಲೀಸನು ಎಲ್ಲಿಗೋ ಓಡಿಹೋದನು. ಅವನನ್ನು ಹಿಡಿಯಲಾಯಿತು. ಸ್ಟೋರಿನ ಸಾಮಾನುಗಳು ಕಾಣೆಯಾಗಿವೆಯೆಂದೂ ಅವುಗಳನ್ನು ಈ ಪೋಲೀಸನೇ ಲುಟಾಯಿಸಿದನೆಂದೂ ತಿಳಿದುಬಂದಿದೆ. ಪೋಲೀಸನ ಪ್ರಯೋಜನ ಇದಲ್ಲವೇ?

—ನಾಗಪುರದಲ್ಲಿ ಕೃಷ್ಣ ಮುರಾರಿ ಎಂಬವನು ಶಾಲೆಗೆ ಹೋಗುತ್ತಿದ್ದ ಶಾಂತಿ ಎಂಬವಳನ್ನು ಒಬ್ಬ ಮೋಟರ್ ಡ್ರೈವರನ ಸಹಾಯದಿಂದ ಕದ್ದೊಯ್ದು ಸಿಕ್ಕಿಹೋಗಿರುವನು. ವಿಚಾರಣೆಯಾಗುತ್ತಿದೆ. ಪ್ರೇಮದ ನ್ಯಾಯ!

—ಮದ್ರಾಸಿನಲ್ಲಿ ಅಫೀಮುಖೋರರ ಒಂದು ಮಳಿಗೆಯನ್ನು ಜಡ್ತಿ ನಡೆಸಲಾಯಿತು. ಗೋಡೆಯ ಒಂದು ತೂತಿನಲ್ಲಿ ಅಫೀಮು ಸಿಕ್ಕಿತು. ಕೆಲವರನ್ನು ಕೈದು ಮಾಡಲಾಯಿತು.

—ಮದ್ರಾಸಿನ ವಾಲ್‌ಟೇಕ್ಸ್ ರೋಡ್‌ನ ಬಳಿ ಒಂದು ಮನೆಯಲ್ಲಿ ಜಡ್ತಿ ನಡೆಸಲಾಗಿ, ಕಳ್ಳಾಟಿಕೆಯಲ್ಲಿ ಶರಾಯಿ ಮಾರುವುದು ಕಂಡು ಬಂದು ಕೆಲವರನ್ನು ಹಿಡಿದರು. ಮಂಗಳೂರಲ್ಲೂ ಕೆಲವು ಮನೆಗಳಿವೆ.

—ಕಾಶಿಯಲ್ಲಿ ಕಳೆದ ತಿಂಗಳಲ್ಲಿ ದೇವಸ್ಥಾನ ಪ್ರವೇಶದ ಗಲಭೆ. ಅಲ್ಲಿ ಇದ್ದ ವಿಶ್ವನಾಥ ದೇವಸ್ಥಾನಕ್ಕೆ ಪಂಚಮರು ಪ್ರವೇಶಿಸುವುದೆಂದು ನಿರ್ಧರಿಸಲಾಗಿತ್ತು. ೧೪೪ನೇ ಸೆಕ್ಷನಿನ ಮೂಲಕ ಮೆರವಣಿಗೆಯನ್ನು ತಡೆದರು. ಗಲಾಟೆ ನಿಂತಿತು!

ಮುಂಬಾಯಿಯಲ್ಲಿನ ಗಲಾಟೆಯು ಶಮನವಾಗಿದೆಯಾದರೂ, ಅಲ್ಲಲ್ಲಿ ಕೊಲೆಗಳೂ ಹೊಡೆತಗಳೂ ನಡೆಯುತ್ತಿವೆ. ಶಾಂತಿರಕ್ಷಣ ಕಮಿಟಿಯೂ, ಸರಕಾರವೂ ಎಚ್ಚರದಿಂದಿವೆ.

—ಅಹಮದಾಬಾದಿನಲ್ಲಿ ಹಗಲುಕಳ್ಳರು ಹೆಚ್ಚುತ್ತಿದ್ದಾರೆ. ದರೋಡೆಗಳು ನಿರ್ಭಯವಾಗಿ ನಡೆಯುತ್ತಿವೆ. ಕಳ್ಳರ ದಿನ.

—ಕಲ್ಕತ್ತೆಯಲ್ಲಿ ಬೀಡಿ ಕಟ್ಟಿದ ಕೂಲಿಗಾಗಿ ನಾಲ್ವರು ಮುಸ್ಲಿಮ ತರುಣರೊಳಗೆ ಜಗಳವಾಗಿ ಹಬೀಬನೆಂಬವನು ಒಬ್ಬನನ್ನು ಕತ್ತಿಯಿಂದ ತಿವಿದನು. ಸ್ಟೇಶನಿಗೆ ಹೋಗಿ ತಾನೇ ದೂರುಕೊಟ್ಟನು.

—ಗಾಂಧಿಜೀಯವರು ಎರವಾಡ ಜೈಲಿನಲ್ಲಿ ತನ್ನ ಸತ್ಯಾಗ್ರಹ ಆಶ್ರಮದ ಕುರಿತು ಒಂದು ಚರಿತ್ರೆಯನ್ನು ಬರೆಯ ತೊಡಗಿರುವರು. ಸಂತೋಷ ಸುಖಗಳಿಂದಲೇ ಇರುವರು.

—ಮುಂಬಾಯಿಯಲ್ಲಿ ಶ್ರೀ. ಜೀಜೀಭಾಯಿ ಎಂಬ ಪಾರ್ಸಿ ತರುಣರೊಬ್ಬರು ವಿಮಾನದ ಮೂಲಕ ಸಮೀಪದ ಊರಿಗೆ ಹೊರಟವರು ಕಾಣೆಯಾಗಿದ್ದಾರೆ. ಪತ್ತೆಯೇ ಇಲ್ಲ. ಪರವೂರಿಗೆ ಹೋದರೋ ಪರಲೋಕಕ್ಕೆ ಹೋದರೋ ತಿಳಿದು ಬಂದಿಲ್ಲ. ಗಾಳಿಯು ಜೋರು ಬೀಸಿದುದರಿಂದ ಹೀಗಾಗಿರಬಹುದಂತೆ.

—ಮುಂಬಾಯಿಯ ವಿದ್ಯಾದಾಯಿನೀ ಸ್ಪೋರ್ಟ್ ಕ್ಲಬ್ಬಿನ ೫ನೇ ವಾರ್ಷಿಕೋತ್ಸವವು ಕಳೆದ ತಿಂಗಳ ೧೨ನೇ ತಾರೀಕಿಗೆ ಶ್ರೀ. ವಿ. ಪಿ. ದೇಸ ಬಿ. ಎ. ಎಟೋರ್ನಿ ಅಟ್‌ಲೋ ಇವರ ಅಧ್ಯಕ್ಷತೆಯಲ್ಲಿ ಜರಗಿತು.

—ಲಾಹೋರಿನಲ್ಲಿ ಜಗತ್‌ಸಿಂಗ್ ಸನ್ ಎಂಡ್ ಬ್ರದರ್ಸ್ ಎಂಬ ಕಂಪೆನಿಯ ಪೇದೆಯು ಹಣದ ಚೀಲವನ್ನೊಯ್ಯುತ್ತಿದ್ದಾಗ ಮೂವರು ಆಂಗ್ಲೊ ಇಂಡಿಯನ್ ತರುಣರಿಗೆ ಬಾಯಿಯಲ್ಲಿ ನೀರು ಸುರಿಯಿತು. ದರೋಡೆಯನ್ನು ನಡೆಸಿಬಿಟ್ಟರು. ಈಗ ಮೂರು ಮೂರು ವರ್ಷಗಳ ಕಠಿಣ ಸಜೆಗೊಳಗಾಗಿದ್ದಾರೆ. ಪಾಪ!

—ಇನ್ನು ಕೆಲವು ದಿನಗಳಲ್ಲೇ ನಮ್ಮ ವೈಸ್ರಾಯರು ಉದಕಮಂಡಲಕ್ಕೂ, ಮೈಸೂರಿಗೂ ಹೋಗಲಿರುವರು.

—ಲಕ್ನೋವಿನಲ್ಲಿ ಬಾಬುಲಾಲ ಎಂಬ ವಿಧುರನು ತನ್ನ ಮೂರು ವರ್ಷ ಪ್ರಾಯದ ಎಳಗೂಸನ್ನು ಕತ್ತು ಮುರಿದು ಕೊಂದಿಕ್ಕಿದನು. ಅವನು ಹುಚ್ಚನೆಂದು ಊಹಿಸಲ್ಪಟ್ಟಿದೆ. ಹೌದೊ ಅಲ್ಲವೋ!

—ಲಾಹೋರಿನಲ್ಲಿ ಒಬ್ಬ ಪುಣ್ಯಾತ್ಮನು ತನ್ನ ಹೆಂಡತಿಯು ರೂಪವತಿಯಲ್ಲದಿದ್ದುದಕ್ಕೆ ಅವಳನ್ನು ಕೊಲೆಮಾಡುವ ಯತ್ನಮಾಡಿದನು. ಅವಳು ಬೊಬ್ಬಿಟ್ಟಳು. ಅವನಿಗೆ ಶಿಕ್ಷೆಯಾಗಿದೆ. ರೂಪವತಿ ಹೆಂಡಿರ ಗಂಡಂದಿರು ಸಂಶಯದಿಂದ ಕೊರಗುವ ಪರಿಯು ಇವನಿಗೆ ತಿಳಿದಿಲ್ಲವೆಂದು ತೋರುತ್ತದೆ.

—ಪ್ರಪಂಚದ ಘನರಾಷ್ಟ್ರಗಳಲ್ಲಿನ ನಿರುದ್ಯೋಗಿಗಳ ಸಂಖ್ಯೆ ಹೀಗಿದೆ:—ಸಂಯುಕ್ತ ಅಮೇರಿಕಾ ೮,೦೦೦೦೦೦, ಜರ್ಮನಿ ೫,೦೦೦೦೦೦, ಫ್ರಾನ್ಸು ೨,೮೦೦೦೦೦, ಬ್ರಿಟನ್ ೨,೬೦೦೦೦೦. ರಷ್ಯಾದಲ್ಲಿ ನಿರುದ್ಯೋಗಿಗಳೇ ಇಲ್ಲ. ನಮ್ಮೂರ ಲೆಖ್ಖವಾಗಲಿಲ್ಲ.

—ಪ್ರಪಂಚದಲ್ಲಿ ಎಲ್ಲಾ ಮನುಷ್ಯರಿಗಿಂತಲೂ ಮಹತ್‌ವ್ಯಕ್ತಿಗಳಾದ ಮಹಾತ್ಮಾ ಗಾಂಧಿಯವರಿಗೆ ಅವರ ಅಗ್ರಗಣ್ಯತೆಗಾಗಿ ಅಮೇರಿಕದ ಕಮ್ಯೂನಿಟಿ ಚರ್ಚಿನವರು ಒಂದು ಮೆಡಲನ್ನು ಸಮರ್ಪಿಸಲಿರುವರು. ಅದರಲ್ಲಿ ಇಡೀ ವಿಶ್ವದ ಚಿತ್ರ, ಗಾಂಧಿಜೀಯವರ ಹೆಸರು ಮೊದಲಾದುವುಗಳಿವೆ.

—ವಾರ್ಧಾದಲ್ಲಿ ಒಬ್ಬ ಒನರರಿ ಮೆಜಿಸ್ಟ್ರೇಟರು ಒಬ್ಬಳು ಹುಡುಗಿಯನ್ನು ಅವಳ ಮನೆಯಿಂದ ಹೊರತಂದು ಹೊಡೆದುದಕ್ಕಾಗಿ ಅವರಿಗೆ ೪ ತಿಂಗಳ ಕಠಿಣ ಸಜೆಯಾಯಿತು. ಕೋಪಕ್ಕೆ ತಕ್ಕ ಮದ್ದು!

—ಲಾಹೋರು ಮೊದಲಾದ ಕಡೆಗಳಲ್ಲಿ ವೇಶ್ಯೆಯರನ್ನು ಪಟ್ಟಣಗಳ ಹೊರಗೆ ಓಡಿಸುತ್ತಿರುವರು. ಒಂದು ಮಸೂದೆಯು ಮಂಜೂರಾಗಲಿದೆ. ವೇಶ್ಯೆಯರನ್ನು ಪ್ರತಿ ಪಟ್ಟಣದಿಂದಲೂ ಓಡಿಸಿದರೆ ಒಳ್ಳೆಯದು.

—ತಿನ್ನೆವಲ್ಲಿಯಲ್ಲಿ ಪೋಲೀಸು ಕೊನ್‌ಸ್ಟೇಬಲರ ಮನೆಗಳಿಗೆ ಬೋಂಬುಗಳನ್ನು ಹಾಕಲು ಯತ್ನಿಸಿದುದಕ್ಕಾಗಿ ಕೆಲವು ಯುವಕರು ಕೈದುಮಾಡಲ್ಪಟ್ಟಿರುವರು.

—ಪರಿದ್‌ಪುರದ ರೈಲ್ವೇ ಸ್ಟೇಶನಿನ ಬಳಿ ರಾಜಬಾರಿ ಎಂಬಲ್ಲಿ ಮೆಜಿಸ್ಟ್ರೇಟರೂ ಪೋಲೀಸ ಸುಪರಿಂಟೆಂಡೆಂಟರೂ ರೈಲಿನಿಂದ ಕೆಳಗಿಳಿಯುತ್ತಿದ್ದಾಗ ಯಾರೋ ಬೋಂಬನ್ನೆಸೆದರು. ಅಪಾದಿತರ್ಯಾರೆಂದು ತಿಳಿದುಬಂದಿಲ್ಲ.

—ಮುಜಾಪರ್‌ಪುರದ ರೈಲ್ವೇ ಸ್ಟೇಶನಿನಲ್ಲಿ ಲೈಸನ್ಸ್ ಇಲ್ಲದೆ ತುಪಾಕಿಗಳನ್ನು ಹಿಡಿದುಕೊಂಡಿದ್ದುದಕ್ಕಾಗಿ ಇಬ್ಬರಿಗೆ ಶಿಕ್ಷೆ.

ಹಾಸ್ಯವನ್ನು ಅವಸರದಿಂದ ಓದುವುದಲ್ಲ. ಅದರಲ್ಲಿನ ಶಬ್ಧಾರ್ಥದಲ್ಲಡಗಿರುವ ಹಾಸ್ಯರಸವನ್ನು ಹೀರಬೇಕು.

ಬಡವರ ಬಂಧು ಹಾಸ್ಯೌಷಧಾಲಯ.

ಹಾಸ್ಯಸಂಗ್ರಹಕಾರರು ಬೇಕಾಗಿದ್ದಾರೆ. ಉತ್ತಮ ಹಾಸ್ಯಗಳಿಗೆ "ಸುಸ್ವಾಗತ" ವಿದೆ.

ಡಾಕ್ಟರರು:
ವಿದ್ವಾನ್ ಪುಟ್ಟಂಭಟ್ಟರು, *Indian Cooking Service.*

ಅತೀ ಅಗ್ಗ! **ಮನೋರೋಗಕ್ಕೆ ಕೆಳಗಿನವು ದಿವ್ಯೌಷಧ** **ನಗುವವರಿಗೆ ಧರ್ಮ!**

ಅಸ್ವಸ್ಥನಾದ ಗಂಡ:—"ಪ್ರಿಯೆ ನಾನು ಸಾಯುತ್ತೇನಲ್ಲ! ಇನ್ನು ನಿನಗೇನು ಗತಿ?"

ಹೆಂಡತಿ:—"ನಿಮ್ಮ ಆಸ್ತಿಯೊಂದೇ"

× × × ×

ತಂದೆ:—"ಪ್ರಹ್ಲಾದ ಚರಿತ್ರೆಯನ್ನು ಓದಿ ನಿನಗೇನು ಗೊತ್ತಾಯಿತು?"

ಮಗ:—"ತಂದೆಯಂತೆ ಮಗ"ನೆಂಬ ಗಾದೆಯು ಶುದ್ಧ ಸುಳ್ಳು ಎಂದು.

× × × ×

ಮಗು:—"ಅಮ್ಮಾ, ನೀನು ನಮ್ಮ ಕೆಲಸದವನ ಹೆಸರನ್ನು ಹೇಳುವುದಿಲ್ಲವಲ್ಲಾ ಅದೇಕೆ?"

ತಾಯಿ:—"ಅದು ನಿನ್ನಪ್ಪನ ಹೆಸರಾದುದಕ್ಕೆ."

× × × ×

ಫೊಟೊಗ್ರಾಫರ್:—ಬೇಕಾದವರ ಫೊಟೊ ತೆಗಿಸಿಕೊಳ್ಳ ಬಹುದು, ಚಾರ್ಜು ಬಹು ಕಡಿಮೆ.

ಯಜಮಾನಿ:—ಹಾಗಾದರೆ ನಮ್ಮ ಯಜಮಾನರದ್ದು ತೆಗಿಯ ಬಹುದೇ?

ಫೊಟೊಗ್ರಾಫರ್:—'ಅವರೆಲ್ಲಿ? ಬರಲಿ!'

ಯಜಮಾನಿ:—ಕಳೆದ ವರ್ಷ ತೀರಿಕೊಂಡು ಹೋಗಿದ್ದಾರೆ.

× × × ×

ಪ್ರಯಾಣಿಕ:—ಲೇ ಕೂಲೀ ಕೂಲೀ—ನನ್ನ ಗಂಟು ಮೂಟೆ ಕಳವಾಗಿ ಹೋಯಿತು.

ಕೂಲಿ:—ಒಳ್ಳೆಯದಾಯಿತು. ಇನ್ನು ನನ್ನ ಅಗತ್ಯ ನಿಮಗಿದೆಯೇ?

× × × ×

ಉಪಾಧ್ಯಾಯ:—ಅಕ್ಬರನು ಹುಟ್ಟಿದ್ದು ಎಲ್ಲೋ?

ಚಿಕ್ಕ ಹುಡುಗರಲ್ಲೊಬ್ಬ:—ಅವರಮ್ಮನ ಹೊಟ್ಟೆಯಲ್ಲಿ ಸಾರ್.

× × × ×

ದಾರಿಹೋಕ:—ನಮಸ್ಕಾರ ಸ್ವಾಮಿ ಹನುಮಂತಾಚಾರ್ರೇ.

ಹನುಮಂತಾಚಾರ್ರು:—ನಮಸ್ಕಾರ, ನನ್ನ ಹೆಸರು ನಿಮಗೆ ಹೇಗೆ ಗೊತ್ತಾಯಿತು?

ದಾರೀಹೋಕ:—ತಮ್ಮ ಮುಖ ನೋಡಿದಾಗಲೇ.

× × × ×

ನಾದಿನಿ:—ಒಂದೇ ಒಂದು ದೋಸೆ ಉಳಿದಿದೆ ತಿಂದುಬಿಡು.

ಅತ್ತಿಗೆ:—ನನಗೆ ಈಗಾಗಲೇ ಹೊಟ್ಟೆ ತುಂಬಾ ಆಗಿದೆ, ಇನ್ನೇನು ಕೊಟ್ಟರೂ ಬೇಡವಮ್ಮ.

ನಾದಿನಿ: (ಪ್ರಸನ್ನವದನೆಯಾಗಿ) ಅಣ್ಣ ಬಂದು ಒಂದು ಚುಂಬನ ಕೊಟ್ಟರೆ?

× × × ×

ನಾಗಮ್ಮ:—ನಿಮಗೆ ಈಗ ಎಷ್ಟು ವಯಸ್ಸು?

ಸುಬ್ಬಮ್ಮ:—ಇಪ್ಪತ್ತೈದು.

ನಾಗಮ್ಮ:—ನೀವು ನಮ್ಮ ಮನೆಗೆ ಬಂದು ಏಳು ವರ್ಷಗಳಾದುವು. ಅಂದಿನಿಂದಲೂ ಇದೇ ಮಾತು ಹೇಳುತಿದ್ದೀರಲ್ಲಾ?

ಸುಬ್ಬಮ್ಮ:—ನಾವೇನು ನಿಮ್ಮ ಹಾಗೆ ಈ ಹೊತ್ತು ಒಂದು, ನಾಳೆ ಒಂದು ಮಾತು ಆಡುವವರಲ್ಲ; ಯಾವಾಗಲೂ ಒಂದೇ ಮಾತು.

ಸಂಗ್ರಹಕಾರರು ಶ್ರೀ. ಇ. ಡಿ. ಅಂಚನ್.

× × × ×

ಸಿನೆಮಾ ನೋಡಲು ಹೋದ ಒಬ್ಬ ದೊಡ್ಡ ಮನುಷ್ಯನು ತನ್ನ ಪಕ್ಕದಲ್ಲಿ ಕೂತಿದ್ದ ಒಬ್ಬ ಸ್ನೇಹಿತನಿಗೆ ಹೆಂಗುಸರ ಸ್ಥಳದಲ್ಲಿ ಕೂತ ಚೆಲುವೆಯೊಬ್ಬಳನ್ನು ತೋರಿಸಿ, ಆಕೆಯನ್ನು ಬಹಳ ಹೊಗಳುತ್ತಾ—ಆ ಸುಂದರಿಗೂ ಅವಳ ಹಿಂದೆ ಕುಳಿತಿರುವ ಕುರೂಪಿಗೂ ಎಷ್ಟು ವ್ಯತ್ಯಾಸವಿದೆ, ನೋಡಿದಿರೋ' ಎಂದು ಕೇಳಿದನು. ಆಗ 'ಆ ಹಿಂದೆ ಇದ್ದವಳು ನನ್ನ ತಂಗಿ'ಯೆಂದು ಆ ಮಿತ್ರನು ಹೇಳಲು 'ಅಯ್ಯೊ' ಆಕೆಯಲ್ಲ. ಆಕೆಯ ಎಡಗಡೆಯಲ್ಲಿ ಕಪ್ಪು ಸೀರೆ ತೊಟ್ಟುಕೊಂಡಿರುವ ಆ ಮುಸುಡಿಯನ್ನು ನಾನು ಹೇಳಿದ್ದು' ಎಂದು ತನ್ನನ್ನು ತಿದ್ದಿಕೊಳ್ಳಲೆತ್ನಿಸಿದನು. 'ಆ ಕೆಂಪು ಶೀರೆಯವಳು ತನ್ನ ಹೆಂಡತಿ'ಯೆಂದು ಆ ಮಿತ್ರನು ಹೇಳಲು, ಆ ದೊಡ್ಡ ಮನುಷ್ಯನು ನಾಚಿಕೆಪಟ್ಟು 'ಇದೊ ಬಂದೆ'ನೆಂದು ಹೊರಗೆ ನಡೆದು ಬಿಟ್ಟನು.

ಸಂಗ್ರಹಕಾರರು ವೇಣುಗೋಪಾಲ ಸುವರ್ಣ

× × × ×

ಉಪಾಧ್ಯಾಯ:— "ಎಡ' ಮತ್ತು 'ಬಲ'ವೆಂಬವುಗಳನ್ನು ವಿವರಿಸಿ".

ಹುಡುಗ:—(ತನ್ನ ಉತ್ತರ ಕಾಗದದಲ್ಲಿ ಹೀಗೆ ಬರೆದನು)—ನನ್ನ ತಾಯಿಯು ಮಲಗುವುದು ನನ್ನ ಬಲದಲ್ಲಿ, ನನ್ನ ತಂದೆಯು ನಿದ್ರಿಸುವುದು ನನ್ನ ಎಡದಲ್ಲಿ,

× × × ×

ತರುಣಿ:—ನನ್ನನ್ನು ವಿವಾಹವಾಗುವುದೆಂದು ನಿಶ್ಚಯವಾದೊಡನೆ ಗೋಪಾಲನಿಗೆ ಏಳು ಲೋಕದ ಸಂತೋಷವಾಯಿತಂತೆ!

ಅವಳ ಮಿತ್ರೆ:—ಅವನು ಮುಂಚೆ ಆರು ಲೋಕಗಳನ್ನು ನೋಡಿರಬೇಕು.

× × × ×

ಉಪಾಧ್ಯಾಯರು:—ನಮ್ಮ ಪಟ್ಟಣದಲ್ಲಿ ದೊಡ್ಡವರು ಯಾರು?

ವಿದ್ಯಾರ್ಥಿ:—ನೀವೆ, ಸರ್.

ಉಪಾ:—ಹೇಗೆ?

ವಿದ್ಯಾರ್ಥಿ:—ನೀವು ನಮ್ಮನ್ನ ಹೊಡೆಯುತ್ತಿರುವುದರಿಂದ.

× × × ×

ರಾಮು:—ಕೃಷ್ಣ, ನಿನ್ನ ತಂದೆಯವರ ಸಂಬಳ ಕಡಿಮೆಯಾಯಿತಂತಲ್ಲ!

ಕೃಷ್ಣ:—ಅಹುದಂತೆ, ಸಂಬಳ ಕಡಿಮೆಯಾದರೂ ಗಿಂಬಳವು ಲಂಚೆಯೂ ಹೆಚ್ಚು ಸಿಗುತ್ತಿದೆಯಂತೆ.

× × × ×

ತಾಯಿ:—ಕೃಷ್ಣೀ, ಮೊನ್ನೆ ನಿನ್ನ ಗಂಡನ ಮನೆಯಲ್ಲಿ ಮೊದಲು ಏನಾಯಿತು?

ಕೃಷ್ಣಿ:—ಮದುವೆಯಾದ ಮೇಲೆ ನಿನ್ನ ಗಂಡನ ಮನೆಯಲ್ಲಿ ನಿನಗೆ ಮೊದಲೇನಾಗಿದ್ದಿತು? ಅದೇ!

× × × ×

ಮಾಸ್ಟರರು:—ಮುಂಚಿನ ಪೋಲೀಸಿನವರಿಗೂ ಈಗಿನ ಪೋಲೀಸಿನವರಿಗೂ ವ್ಯತ್ಯಾಸವೇನು?

ರಂಗನಾಥ:—ಮುಂಚಿನ ಪೋಲೀಸರು ದೇಶವನ್ನು ಕಾಪಾಡಲು ನೋಡುತ್ತಿದ್ದರು, ಈಗಿನ ಪೋಲೀಸರನ್ನು ಸುಪರಿಂಟೆಂಡೆಂಟರು ಕಾವಲು ನೋಡುತ್ತಾರೆ.

× × × ×

ಮಗ:—ಅಪ್ಪಾ! ಸರಕಾರಗಳ ಕೆಲಸವೇನು?

ತಂದೆ:—ನಮ್ಮ ಕಂದಾಯವನ್ನು ವಸೂಲ್ಮಾಡಿ ತಮ್ಮ ಕೆಲಸಗಾರರಿಗೆ ಕೊಡುವುದು.

× × × ×

ಗುರು:—ಬ್ರಿಟಿಷರ ಆಳ್ವಿಕೆಯಿಂದ ನಮಗೆ ಯಾವ ಪ್ರಯೋಜನಗಳಾದುವು?

ಶಿಷ್ಯ:—'ಗಳಳ' 'ಓರ್ಡಿನೆನ್ಸ್' 'ಪಿಕೆಟಿಂಗ್,' 'ಪೆರೋಲ್,' ಎಂಬ ಶಬ್ದಗಳ ಅರ್ಥಗಳು ತಿಳಿದುವು ಅಷ್ಟೆ.

× × × ×

ಮಿಸ್ಟ್ರೆಸ್:—(ಕ್ಲಾಸಿನಲ್ಲಿ) ರಮಣಿ ನಿನ್ನ ಗಂಡನ ಹೆಸರೇನು?

ರಮಣಿ:—ನನ್ನ ಗಂಡಂದಿರ ಹೆಸರನ್ನು ಹೇಳುವುದು ಧರ್ಮವಲ್ಲ. (ಎಲ್ಲರೂ ನಕ್ಕರು.)

× × × ×

ಒಬ್ಬ ಒಕ್ಕಲಿಗನು ಹೊಲದಲ್ಲಿದ್ದ ಸೌತೆಕಾಯಿಗಳು ಮಾಯವಾಗುತ್ತಿರುವುದನ್ನು ಕಂಡು ರಾತ್ರೆ ಬಲೆ ಬೀಸಿಟ್ಟನು. ಬೆಳಿಗ್ಗೆ ನೋಡುವಾಗ ತನ್ನ ಭೂಮಿಯ ಯಜಮಾನನ ಹೆಂಡತಿಯು ಅದರೊಳಗೆ ಬಿದ್ದಿದ್ದಳು.

× × × ×

ಗುರು:—ಬೆಂಗಳೂರಿಂದ ಮಂಗಳೂರಿಗೆ ಎಷ್ಟು ದೂರವಿದೆ?

ಶಿಷ್ಯ—ಹೆಚ್ಚಿಲ್ಲ ಸರ್. ಮೊದಲಿನ ಅಕ್ಷರದಷ್ಟು ಮಾತ್ರ.

× × × ×

ನಾನು ಎಂಬುದು ಅಹಂಕಾರ. ನನ್ನದು ಎಂಬುದು ಅಹಂಭಾವ.

Printed by V. S. Kudva at the Sharada Press, Mangalore and published by Mangalore Jarappa at the Badavara Bandhu Office, Hampankatta, Mangalore